**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು</u>**

**<u>Spl.C. No: 30/2013</u>**

ಪ್ರಾ.ಸಾ.-07
ಚಾ.ಸಾ.-26

| | | |
|---|---|---|
| ಸಾಕ್ಷಿದಾರರ ಹೆಸರು | : | ಕೆ.ಟಿ.ಗುರುರಾಜ್ |
| ತಂದೆಯ ಹೆಸರು | : | ಲೇಟ್ ಕೆ.ಎಸ್ ತೋಪಯ್ಯ ನಾಯ್ಕ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಪಿ.ಐ. ಸಿ.ಇ.ಎನ್ ಪೊಲೀಸ್ ಠಾಣೆ, ಶಿವಮೊಗ್ಗ |
| ವಾಸ ಸ್ಥಳ | : | ಶಿವಮೊಗ್ಗ |

**<u>ದಿನಾಂಕಃ 10-02-2020</u>**

**<u>ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಃ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ.ಪಿ. ಯವರಿಂದಃ</u>**

1. ದಿನಾಂಕಃ27-11-2010 ರಿಂದ 03-10-2013 ರವರೆಗೆ ನಾನು ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 23-04-2011 ರಂದು ಸಂಜೆ 5.30 ಗಂಟೆಗೆ ಸುರ್ಜಿತ್ ಎನ್ನುವವರು ಠಾಣೆಗೆ ಹಾಜರಾಗಿ, ತಾವು ತಮ್ಮ ಜಮೀನನ್ನು ಪ್ರಸನ್ನ ಎನ್ನುವವರಿಗೆ ಮಾರಾಟ ಮಾಡಲು ಉದ್ದೇಶಿಸಿದ್ದು, ಅದಕ್ಕೆ ಸಂಬಂಧಿಸಿದಂತೆ, ತನ್ನ ಜಮೀನನ್ನು ಪೋಡಿ ಮತ್ತು ದುರಸ್ತಿ ಮಾಡಿಕೊಡಲು ತಹಸಿಲ್ದಾರ್ ಕಛೇರಿಗೆ ಅರ್ಜಿ ನೀಡಿದ್ದು, ಸದರಿ ಕೆಲಸ ಮಾಡಿಕೊಡಲು ತಹಸಿಲ್ದಾರ್ ಮತ್ತು ಸರ್ವೆ ಅವರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ತಿಳಿಸಿದರು. ನಾನು ನಮ್ಮ ಕಛೇರಿಯಲ್ಲಿದ್ದ ಸೋನಿ ವಾಯ್ಸ್ ರೆಕಾರ್ಡರನ್ನು ಅದು ಖಾಲಿ ಇದೆ ಎಂದು ಖಾತ್ರಿಪಡಿಸಿಕೊಂಡು ಆತನಿಗೆ ನೀಡಿದೆ. ಸರ್ವೆಯರ್ ಮತ್ತು ತಹಸಿಲ್ದಾರರನ್ನು

ಪುನಃ ಭೇಟಿಯಾಗಿ ಅವರೊಂದಿಗೆ ಈ ವಿಷಯದ ಬಗ್ಗೆ ಮಾತುಕತೆ ಮಾಡಿ, ಆಗ ನಡೆದ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡು ಬರುವಂತೆ ತಿಳಿಸಿ, ವಾಯ್ಸ್ ರೆಕಾರ್ಡರನ್ನು ಅವರಿಗೆ ಕೊಟ್ಟೆ.

3. ದಿನಾಂಕಃ 28-04-2011 ರಂದು ಸಂಜೆ 5.00 ಗಂಟೆಗೆ ಸುರ್ಜಿತ್ ಬಿನ್ ಜಯರಾಮೇಗೌಡ ನಮ್ಮ ಕಛೇರಿಗೆ ಮರಳಿ ಬಂದು, ಲಿಖಿತ ದೂರನ್ನು ಸಲ್ಲಿಸಿದ. ಅದನ್ನು ಸ್ವೀಕರಿಸಿಕೊಂಡೆ. ಅದನ್ನು ಠಾಣಾ ಮೊಕದ್ದಮೆ ಸಂ. 7/2011 ಕಲಂ.7, 13(1)(ಡಿ) ಸಹ ಕಲಂ.13(2) ಭ್ರಷ್ಟಾಚಾರ ನಿಷೇದ ಕಾನೂನು ಅಡಿಯಲ್ಲಿ ಪ್ರಕರಣ ದಾಖಲು ಮಾಡಿದೆ. ಪ್ರ.ವ. ವರದಿಯನ್ನು ದೂರಿನೊಂದಿಗೆ ಸೀಲಾದ ಲಕೋಟೆಯಲ್ಲಿ ಇಟ್ಟು, ಮನವಿ ಪತ್ರದೊಂದಿಗೆ ಠಾಣಾ ಪೊಲೀಸ್ ಪೇದೆ ಚಾಸಾ-19-ಚಂದ್ರಶೇಖರ್ ಬಿನ್ ಪುಟ್ಟಯ್ಯ ಇವರ ಮುಖಾಂತರ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ. ಸುರ್ಜಿತ ಕೊಟ್ಟಂತಹ ದೂರನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿ.ಪಿ.1 ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ. 46 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 46(ಎ) ಎಂದು ಗುರುತಿಸಲಾಯಿತು.

4. ಎರಡು ಜನ ಸಾಕ್ಷಿದಾರರನ್ನು ಕರೆದು ತರುವಂತೆ ಮನವಿ ಪತ್ರದೊಂದಿಗೆ ನಮ್ಮ ಠಾಣೆ ಸಿಬ್ಬಂದಿ ಚಾಸಾ-23-ಕೆ.ಎನ್.ಬಸವರಾಜ್, ಇವರ ಮುಖಾಂತರ, ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕೆ ಎಸ್ ಆರ್ ಟಿ ಸಿ, ಚಿಕ್ಕಮಗಳೂರು, ಇವರಿಗೆ ಮನವಿ ಪತ್ರ ಕೊಡುವಂತೆ ಇಲಾಖಾ ವಾಹನದಲ್ಲಿ ಕಳುಹಿಸಿಕೊಟ್ಟಿದ್ದೆ. ಸಂಜೆ 6.00 ಗಂಟೆಗೆ ಚಾಸಾ-23, ಚಾಸಾ-3-ರಾಮಚಂದ್ರನಾಯ್ಕ ಮತ್ತು ಎಸ್.ಎ.ಮಂಜುನಾಥ(ಪ್ರಾಸಾ-2) ಇವರು ನನ್ನ ಮುಂದೆ ಹಾಜರಾಗಿ ವರದಿ

ಮಾಡಿಕೊಂಡರು. ಅವರಿಗೆ ನನ್ನನ್ನು ಪರಿಚಯಿಸಿಕೊಂಡೆ. ಆ ದಿನ ಅವೇಳೆ ಆದ ಕಾರಣ, ದಿನಾಂಕಃ 29-04-2011 ರಂದು ಬೆಳಿಗ್ಗೆ 5.45 ಗಂಟೆಗೆ ಲೋಕಾಯುಕ್ತ ಪೊಲೀಸ್ ಠಾಣೆಗೆ ಬರುವಂತೆ ಹೇಳಿ ಕಳುಹಿಸಿಕೊಟ್ಟೆ. ಪ್ರಾಸಾ-1 ಕ್ಕೂ ಸಹಾ ಅದೇ ದಿನ ಅದೇ ಸಮಯದಲ್ಲಿ ಬರುವಂತೆ ಹೇಳಿದೆ.

5. ದಿನಾಂಕಃ 29-04-2011 ರಂದು ನಾನು ಮತ್ತು ನನ್ನ ಸಿಬ್ಬಂದಿಗಳು ಬೆಳಿಗ 5.00 ಗಂಟೆಗೆ ಲೋಕಾಯುಕ್ತ ಪೊಲೀಸ್ ಠಾಣೆಗೆ ಬಂದೆವು. ಬೆಳಿಗ್ಗೆ 5.45 ಗಂಟೆಗೆ ಪ್ರಾಸಾ-1, ಪ್ರಾಸಾ-2 ಮತ್ತು ಚಾಸಾ-3 ನಮ್ಮ ಠಾಣೆಗೆ ಬಂದರು. ಅವರಿಗೆ ನಮ್ಮ ಠಾಣೆಯ ಸಿಬ್ಬಂದಿಗಳನ್ನು ಪರಿಚಯಿಸಿದೆ. ನಮ್ಮ ಠಾಣೆಯಲ್ಲಿ ಕುಳಿತಿದ್ದ ಪ್ರಾಸಾ-1 ನ್ನು ತೋರಿಸಿ, ಪ್ರಕರಣದ ಬಗ್ಗೆ ಮಾಹಿತಿ ತಿಳಿಸಿದೆ. ದೂರು ಮತ್ತು ಪ್ರ,ವ.ವರದಿಯ ನಕಲನ್ನು ಅವರಿಗೆ ಕೊಟ್ಟು ಓದಿ ಕೊಡುವಂತೆ ಹೇಳಿದೆ. ಪ್ರಾಸಾ-2 ಮತ್ತು ಚಾಸಾ-3 ಅವುಗಳನ್ನು ಓದಿ ತಿಳಿದುಕೊಂಡರು. ದೂರಿನಲ್ಲಿ ಬರೆದ ವಿಷಯಗಳು ಸತ್ಯವೇ ಎಂದು ಪ್ರಾಸಾ-1 ನ್ನು ಕೇಳಿದರು. ಅದಕ್ಕೆ ಪ್ರಾಸಾ-1 ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿದೆ ಎಂದು ತಿಳಿಸಿದರು.

6. ನನ್ನ ಕೋರಿಕೆಯ ಮೇರೆಗೆ ಪ್ರಾಸಾ-2 ಮತ್ತು ಚಾಸಾ-3 ಪಂಚ ಸಾಕ್ಷಿಗಳಾಗಿ ಬರಲು ಒಪ್ಪಿಕೊಂಡರು. ಪ್ರಾಸಾ-1 ದಿನಾಂಕಃ 25-04-2011 ರಂದು ಆರೋಪಿಗಳನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಅವರ ಮಧ್ಯೆ ನಡೆದ ಸಂಭಾಷಣೆಯನ್ನು ವಾಯ್ಸ್ ರೆಕಾರ್ಡರಿನಲ್ಲಿ ದಾಖಲು ಮಾಡಿಕೊಂಡಿದ್ದರು. ಸದರಿ ಡಿಜಿಟಲ್ ವಾಯ್ಸ್ ರೆಕಾರ್ಡರನ್ನು ಪ್ಲೇ ಮಾಡಲಾಯಿತು. ಸದರಿ ಸಂಭಾಷಣೆಯಲ್ಲಿ ಪಂಚ ಸಾಕ್ಷಿದಾರರು ಫಿರ್ಯಾದಿಯ ಧ್ವನಿಯನ್ನು ಗುರುತಿಸಿದ್ದಾರೆ. ಅಲ್ಲದೆ ಫಿರ್ಯಾದಿ ಉಳಿದ 2 ಧ್ವನಿಗಳಲ್ಲಿ ಒಂದು ತರೀಕೆರೆ ತಹಸಿಲ್ದಾರ್ ಕೃಷ್ಣ ಕುಮಾರ, ಇನ್ನೊಂದು ಸರ್ವೆಯರ್ ಆದ ರಮೇಶ (ಅಂದರೆ 1 ಮತ್ತು 2 ನೇ ಆರೋಪಿಗಳದ್ದು) ಎಂದು ಗುರುತಿಸಿದರು. ಸದರಿ

ಸಂಭಾಷಣೆಯಲ್ಲಿ ಆರೋಪಿಗಳು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು ಕಂಡು ಬಂದಿದೆ. ಡಿಜಿಟಲ್ ರೆಕಾರ್ಡರಿನಲ್ಲಿದ್ದ ಸಂಭಾಷಣೆಯನ್ನು ಪಂಚರ ಸಮಕ್ಷಮ ಸಿ.ಡಿ.ಗೆ ವರ್ಗಾಯಿಸಿದ್ದೇನೆ. ಸದರಿ ಸಿ.ಡಿ. ಮೇಲೆ ಮಾರ್ಕರ್ ಪೆನ್ನಿನಿಂದ ಪಂಚರ, ಫಿರ್ಯಾದಿಯ ಸಹಿಗಳನ್ನು ಪಡೆದಿದ್ದು, ನಾನೂ ಸಹಿ ಮಾಡಿದ್ದೇನೆ. ಸದರಿ ಸಿ.ಡಿ.ಯನ್ನು ಒಂದು ಕವರಿನಲ್ಲಿ ಹಾಕಿ, ಕವರನ್ನು ಅಂಟಿಸಿ, ಅದರ ಮೇಲೆ ಪ್ರಕರಣದ ಸಂಖ್ಯೆ ಬರೆದ ಚೀಟಿಯನ್ನು ಅಂಟಿಸಿದೆ. ಅದರ ಮೇಲೆ ಪಂಚರ ಮತ್ತು ಫಿರ್ಯಾದಿಯ ಸಹಿ ಪಡೆದು, ಅದಕ್ಕೆ ನಾನೂ ಸಹಿ ಮಾಡಿದ್ದೇನೆ. ಸದರಿ ಕವರಿನ ಮೇಲೆ ಇಂಗ್ಲೀಷಿನ J ಅಕ್ಷರದಿಂದ ಮೊಹರು ಹಾಕಿ, ನನ್ನ ವಶಕ್ಕೆ ಪಡೆದುಕೊಂಡಿದ್ದೇನೆ. ಸದರಿ ಕವರನ್ನು ಈಗ ನೋಡುತ್ತಿದ್ದು, ಸಿ.ಡಿ.ಗೆ ಈ ಮೊದಲು ಮುದ್ದೆಮಾಲು 1 ಎಂದು ಗುರುತಿಸಲಾಗಿದೆ, ಅದರ ಮೇಲೆ ಇರುವ ಮೊಹರು ಹಾಕಿದ ಕವರಿಗೆ ಮುದ್ದೆಮಾಲು 1(ಎ) ಎಂದು ಗುರುತಿಸಲಾಗಿದೆ. (ಮುದ್ದೆಮಾಲು 1 ಕ್ಕೆ ಅದನ್ನು ಅಮಾನತ್ತುಪಡಿಸುವ ಸಮಯದಲ್ಲಿ ಒಂದು ಕವರ್ ಹಾಕಿದ್ದು, ಆ ನಂತರದಲ್ಲಿ ನ್ಯಾಯಾಲಯದ ಅನುಮತಿ ಪಡೆದು, ಸಿಡಿಯನ್ನು ತೆರೆದು, ನಂತರ ಪುನಃ ಅದನ್ನು ಕವರಿನಲ್ಲಿ ಹಾಕಿ ಮೊಹರು ಮಾಡುತ್ತೇವೆ, ಎರಡನೇ ಬಾರಿ ಮಾಡಿದ ಕವರಿಗೆ ಈ ಮೊದಲು ಮುದ್ದೆಮಾಲು 1(ಎ) ಎಂದು ಗುರುತಿಸಲಾಗಿದೆ.)

7. ಫಿರ್ಯಾದಿಗೆ ವಿಚಾರಿಸಿ, ಆತ ಆರೋಪಿಗೆ ಕೊಡಲು ತಂದಂತಹ ಹಣದ ಬಗ್ಗೆ ವಿಚಾರಿಸಿದೆ. ಅವರು ಆರೋಪಿಗೆ ಕೊಡಲು ರೂ.1,00,000/- ವನ್ನು ತಂದಿದ್ದರು. ಸದರಿ ನಗದು ಹಣ ರೂ. 1000/- ಮುಖಬೆಲೆಯ 100 ನೋಟುಗಳು ಇದ್ದವು. ಸದರಿ ನೋಟಿನ ಕ್ರಮ ಸಂಖ್ಯೆಗಳನ್ನು ಬರೆದುಕೊಳ್ಳಲು ಪ್ರಾಸಾ-2 ಮತ್ತು ಚಾಸಾ-3 ಕ್ಕೆ ತಿಳಿಸಿದೆ, ಅದರಂತೆ ಚಾಸಾ-3 ಒಂದು ಹಾಳೆಯಲ್ಲಿ ನೋಟುಗಳ ಕ್ರಮ ಸಂಖ್ಯೆಗಳನ್ನು ಬರೆದುಕೊಂಡಿದ್ದಾರೆ.

8. ನನ್ನ ಅಲ್ಮೆರಾದಲ್ಲಿದ್ದ ಎರಡು ಬಾಟಲಿಗಳನ್ನು ತೆಗೆದೆ. ಅದರಲ್ಲಿ ಒಂದು ಬಾಟಲಿಯಲ್ಲಿ ಪಿನಾಪ್ತಲಿನ್ ಪೌಡರ್ ಇತ್ತು, ಇನ್ನೊಂದರಲ್ಲಿ ಸೋಡಿಯಂ ಕಾರ್ಬೋನೇಟ್ ಪುಡಿ ಇತ್ತು. ಅವುಗಳ ಉಪಯೋಗದ ಬಗ್ಗೆ ಪ್ರಾಸಾ-1, 2 ಮತ್ತು ಚಾಸಾ-3 ಇವರಿಗೆ ತಿಳಿಸಿದೆ. ನನ್ನ ನಿರ್ದೇಶನದ ಮೇರೆಗೆ ಸಿಬ್ಬಂದಿಯಾದ ಬಸವರಾಜ ಸದರಿ ನೋಟುಗಳ ಎರಡೂ ಬದಿಗಳಿಗೆ ಪಿನಾಪ್ತಲಿನ್ ಪೌಡರನ್ನು ಸವರಿದರು. ಪ್ರಾಸಾ-1 ರ ಅಂಗಶೋಧನೆಯನ್ನು ಪ್ರಾಸಾ-2 ರ ಮುಖಾಂತರ ಮಾಡಿಸಿದೆ. ಪ್ರಾಸಾ-1 ರ ಶರ್ಟಿನ ಎಡ ಭಾಗದ ಜೇಬಿನಲ್ಲಿ ಒಂದು ಮೊಬೈಲ್ ಫೋನ್ ಮತ್ತು ರೂ. 1700/- ನಗದು ಹಣ ಇತ್ತು. ಆತನ ಪ್ಯಾಂಟಿನ ಬಲ ಜೇಬಿನಲ್ಲಿ ಈ ಪ್ರಕರಣದ ಪ್ರ,ವ.ವರದಿಯ ನಕಲು ಇತ್ತು. ಪ್ಯಾಂಟಿನ ಬಲ ಬದಿಯ ಜೇಬಿನಲ್ಲಿದ್ದ ಪ್ರ ವ ವರದಿಯ ನಕಲನ್ನು ತೆಗೆಸಿ, ಅದನ್ನು ಶರ್ಟಿನ ಎಡ ಭಾಗದ ಜೇಬಿನಲ್ಲಿ ಇಡಲು ತಿಳಿಸಿದೆ, ಅದರಂತೆ ಅವರು ಪ್ರ ವ ವರದಿಯ ನಕಲನ್ನು ಶರ್ಟಿನ ಎಡ ಭಾಗದ ಜೇಬಿನಲ್ಲಿ ಇರಿಸಿದರು. ಪಿನಾಪ್ತಲಿನ್ ಪುಡಿ ಲೇಪಿತ ನೋಟುಗಳನ್ನು ಎಣಿಕೆ ಮಾಡಿ, ಪ್ರಾಸಾ-1 ಧರಿಸಿದ ಪ್ಯಾಂಟಿನ ಮುಂಭಾಗದ ಬಲ ಭಾಗದ ಜೇಬಿನಲ್ಲಿ ಇಡಲು ಚಾಸಾ-3 ರಾಮಚಂದ್ರನಾಯಕನಿಗೆ ಹೇಳಿದೆ. ಅವರು ಪಿನಾಪ್ತಲಿನ್ ಪುಡಿ ಲೇಪಿತ ನೋಟುಗಳನ್ನು ಎಣಿಸಿ, ಪ್ರಾಸಾ-1 ಧರಿಸಿದ ಪ್ಯಾಂಟಿನ ಮುಂಭಾಗದ ಬಲ ಭಾಗದ ಜೇಬಿನಲ್ಲಿ ಇರಿಸಿದ. ನಂತರ ನನ್ನ ಸೂಚನೆ ಮೇರೆಗೆ ಚಾಸಾ-19 ಪಿ ಚಂದ್ರಶೇಖರ, ಒಂದು ಗಾಜಿನ ಬಟ್ಟಲಿನಲ್ಲಿ ಶುದ್ಧೀಕರಿಸಿದ ನೀರನ್ನು ಹಾಕಿ, ಅದರಲ್ಲಿ ಸ್ವಲ್ಪ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಬೆರೆಸಿ ದ್ರಾವಣವನ್ನು ತಯಾರಿಸಿಕೊಂಡರು. ಸದರಿ ದ್ರಾವಣಕ್ಕೆ ಯಾವುದೇ ಬಣ್ಣ ಇರಲಿಲ್ಲ. ಸದರಿ ದ್ರಾವಣದಲ್ಲಿ ಚಾಸಾ-3 ರಾಮಚಂದ್ರನಾಯಕ, ಅವರಿಗೆ ಪುಡಿಯನ್ನು ಸವರಿದ ನೋಟುಗಳನ್ನು ಎಣಿಕೆ ಮಾಡಿದ ಕೈಗಳನ್ನು ತೊಳೆಸಲಾಗಿ, ಬಣ್ಣ ರಹಿತವಾದ ದ್ರಾವಣ ಗುಲಾಬಿ ಬಣ್ಣಕ್ಕೆ ಬದಲಾಯಿತು.

ನಾನು ಪ್ರಾಸಾ-1, 2 ಮತ್ತು ಚಾಸಾ-3 ಇವರಿಗೆ ಪಿನಾಪ್ತಲಿನ್ ಪುಡಿ ಮತ್ತು ಸೋಡಿಯಂ ಕಾರ್ಬೊನೇಟ್ ಪುಡಿಯ ದ್ರಾವಣದ ಮಧ್ಯೆ ನಡೆಯುವ ರಾಸಾಯನಿಕ ಪ್ರಕ್ರಿಯೆಗಳನ್ನು ತಿಳಿಸಿ, ಆರೋಪಿಗಳು ಫಿರ್ಯಾದಿಯಿಂದ ಪಿನಾಪ್ತಲಿನ್ ಪುಡಿ ಲೇಪಿತ ನಗದು ಹಣವನ್ನು ಪಡೆದುಕೊಂಡರೆ ಅವರ ಕೈ ಬೆರಳುಗಳನ್ನು ಇದೇ ರೀತಿ ಪರೀಕ್ಷಿಸಿದರೆ, ಬಣ್ಣ ರಹಿತವಾದ ದ್ರಾವಣ ಗುಲಾಬಿ ಬಣ್ಣಕ್ಕೆ ಬದಲಾಗುತ್ತದೆ ಮತ್ತು ಆರೋಪಿಗಳು ಲಂಚದ ಹಣವನ್ನು ಸ್ವೀಕರಿಸಿದ್ದು ಸಾಬೀತಾಗಬಹುದು ಎಂದು ತಿಳಿಸಿದೆ. ಚಾಸಾ-3 ಕೈ ತೊಳೆದ ದ್ರಾವಣವನ್ನು ಒಂದು ಗಾಜಿನ ಬಾಟಲಿಯಲ್ಲಿ ಸಂಗ್ರಹಿಸಿ, ಬಾಟಲಿಗೆ ಮುಚ್ಚಳ ಹಾಕಿ, ಅದನ್ನು ಬಟ್ಟೆಯಿಂದ ಸುತ್ತಿ, ದಾರದಿಂದ ಕಟ್ಟಿ, ಅರಗಿನಲ್ಲಿ J ಎನ್ನುವ ಅಕ್ಷರದಿಂದ ಮೊಹರು ಹಾಕಿದೆ. ಈ ಪ್ರಕರಣದ ಕೇಸಿನ ಸಂಖ್ಯೆ ಮತ್ತು ವಿವರ, ಹಾಗೂ ವಸ್ತುವಿನ ವಿವರ ಬರೆದ ಚೀಟಿಯ ಮೇಲೆ ಪಂಚರ, ಫಿರ್ಯಾದಿದಾರರ ಸಹಿ ಪಡೆದು, ಅದಕ್ಕೆ ನಾನೂ ಸಹಿ ಮಾಡಿ, ಅದನ್ನು ಬಾಟಲಿಯ ಮೇಲೆ ಅಂಟಿಸಿದೆ. ಅದಕ್ಕೆ ವಸ್ತು ಸಂ. 2 ಎಂದು ಗುರುತಿಸಿ, ಅದನ್ನು ನನ್ನ ವಶಕ್ಕೆ ಪಡೆದುಕೊಂಡೆ. ಸದರಿ ಬಾಟಲಿಯನ್ನು ಈಗ ತೋರಿಸಿದಲ್ಲಿ ಗುರುತಿಸುತ್ತೇನೆ. ಸದರಿ ಬಾಟಲಿಯನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ಮುದ್ದೆಮಾಲು 2 ಎಂದು ಗುರುತಿಸಲಾಗಿದೆ.

9. ನಗದು ನೋಟುಗಳಿಗೆ ಲೇಪನ ಮಾಡಲು ಬಳಸಿದ ಪಿನಾಪ್ತಲಿನ್ ಪುಡಿಯ ಸ್ವಲ್ಪ ಭಾಗವನ್ನು ಸ್ಯಾಂಪಲ್ ಗಾಗಿ ಚಿಕ್ಕ ಪೊಟ್ಟಣ ಮಾಡಿ, ಅದನ್ನು ಒಂದು ಕವರಿನಲ್ಲಿ ಇಟ್ಟು, ಕವರನ್ನು ಅಂಟಿಸಿ, ಅದರ ಮೇಲೆ ಕೇಸಿನ ಸಂಖ್ಯೆ ಮತ್ತು ವಿವರ, ಹಾಗೂ ವಸ್ತುವಿನ ವಿವರ ಬರೆದ ಚೀಟಿಯ ಮೇಲೆ ಪಂಚರ, ಫಿರ್ಯಾದಿದಾರರ ಸಹಿ ಪಡೆದು, ಅದಕ್ಕೆ ನಾನೂ ಸಹಿ ಮಾಡಿ, ಅದನ್ನು ಕವರಿನ ಮೇಲೆ ಅಂಟಿಸಿದೆ. ಅದಕ್ಕೆ ವಸ್ತು ಸಂ. 3 ಎಂದು ಗುರುತಿಸಿ, ಅದನ್ನು ನನ್ನ ವಶಕ್ಕೆ ಪಡೆದುಕೊಂಡೆ. ಸದರಿ ಕವರನ್ನು ಈಗ ತೋರಿಸಿದಲ್ಲಿ ಗುರುತಿಸುತ್ತೇನೆ.

ಸದರಿ ಕವರನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ಮುದ್ದೆಮಾಲು 3 ಎಂದು ಗುರುತಿಸಲಾಗಿದೆ.

10. ಮುದ್ದೆಮಾಲು-1 ಮತ್ತು 2 ಕ್ಕೆ ಮೊಹರು ಮಾಡಲು ಉಪಯೋಗಿಸಿದ ಇಂಗ್ಲೀಷಿನ J ಅಕ್ಷರದಿಂದ ಹಾಕಿದ ಸೀಲನ್ನು ಮುಂದೆ ಕೇಳಿದಾಗ ತಂದು ಹಾಜರುಪಡಿಸುವಂತೆ ತಿಳಿಸಿ, ಚಾಸಾ-3 ರಾಮಚಂದ್ರನಾಯಕನಿಗೆ ಕೊಟ್ಟೆ. ಅಮಾನತ್ತುಪಡಿಸಿದ ವಸ್ತುಗಳನ್ನು, ಪಿನಾಪ್ತಲಿನ್ ಪುಡಿ ಹಾಕಿದ ಬಾಟಲಿಯನ್ನು ನನ್ನ ಕಛೇರಿಯ ಅಲ್ಮೆರಾದಲ್ಲಿ ಇಟ್ಟೆ. ನಂತರ ನಾನು, ಪಂಚರು, ಫಿರ್ಯಾದಿ ನಮ್ಮ ಕೈಗಳನ್ನು ಸೋಪು ಮತ್ತು ನೀರಿನಿಂದ ತೊಳೆದುಕೊಂಡೆವು. ಅಲ್ಲದೆ, ಫಿರ್ಯಾದಿಗೆ ಆ ಹಣವನ್ನು ಆರೋಪಿಗಳು ಕೇಳಿದಲ್ಲಿ ಮಾತ್ರ ಕೊಡುವಂತೆ ಅಲ್ಲಿಯವರೆಗೂ ಸದರಿ ಹಣವನ್ನು ಮುಟ್ಟಬಾರದು ಎಂದು ಸೂಚಿಸಿದೆ. ಫಿರ್ಯಾದಿ ಆರೋಪಿಗಳನ್ನು ಕಾಣಲು ಹೋದಾಗ, ಅವರನ್ನು ಹಿಂಬಾಲಿಸಿ, ಅವರ ಮತ್ತು ಆರೋಪಿಗಳ ಮಧ್ಯೆ ನಡೆಯುವ ಎಲ್ಲಾ ವಿದ್ಯಾಮಾನಗಳನ್ನು ನೋಡಿ, ಕೇಳಿಸಿಕೊಂಡು, ತಿಳಿಸಬೇಕೆಂದು ನಾನು ಪ್ರಾಸಾ-2 ಮಂಜುನಾಥನಿಗೆ ತಿಳಿಸಿದ್ದೇನೆ. ಅಲ್ಲದೆ, ಫಿರ್ಯಾದಿಗೆ ಆರೋಪಿಗಳು ಲಂಚದ ಹಣವನ್ನು ಸ್ವೀಕರಿಸಿದಲ್ಲಿ ತನ್ನ ಕೈಯಿಂದ ಮುಖವನ್ನು ಒರೆಸಿಕೊಳ್ಳುವ ಮುಖಾಂತರ ಸನ್ನೆಯನ್ನು ಮಾಡುವಂತೆ ತಿಳುವಳಿಕೆ ನೀಡಿದೆ. ಆರೋಪಿಗಳನ್ನು ಕಾಣಲು ಹೋದಾಗ ಅವರೊಂದಿಗೆ ನಡೆಯುವ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಳ್ಳುವಂತೆ ತಿಳಿಸಿ, ಅವರಿಗೆ ಸೋನಿ ವಾಯ್ಸ್ ರೆಕಾರ್ಡರನ್ನು ನೀಡಿದೆ. ಸದರಿ ವಾಯ್ಸ್ ರೆಕಾರ್ಡರನ್ನು ಪ್ಲೇ ಮಾಡಿ ನೋಡಿದಾಗ ಅದರಲ್ಲಿ ಯಾವುದೇ ಧ್ವನಿ ರೆಕಾರ್ಡ್ ಆಗಿರಲಿಲ್ಲ ಎಂದು ಕಂಡು ಬಂದಿದೆ. ಸದರಿ ವಾಯ್ಸ್ ರೆಕಾರ್ಡರನ್ನು ಪ್ರಾಸಾ-1 ತನ್ನ ಪ್ಯಾಂಟಿನ ಮುಂದಿನ ಎಡ ಭಾಗದ ಜೇಬಿನಲ್ಲಿ ಇಟ್ಟುಕೊಂಡಿದ್ದಾರೆ. ಈ ಎಲ್ಲಾ ವಿವರಗಳ ಬಗ್ಗೆ ಆ ದಿನ ಬೆಳಿಗ್ಗೆ 6.00 ಗಂಟೆಯಿಂದ 8.30 ಗಂಟೆಯವರೆಗೆ ಪ್ರಾಯೋಗಿಕ

ಪಂಚನಾಮೆಯನ್ನು ತಯಾರಿಸಿದ್ದೇನೆ. ಆ ಸಮಯದಲ್ಲಿ ನಮ್ಮ ಸಿಬ್ಬಂದಿಯಾದ ಉಮೇಶ, ಎನ್ನುವವನಿಂದ ಸದರಿ ದೃಶ್ಯಗಳ ಫೋಟೋಗಳನ್ನು ತೆಗೆಯಲಾಗಿದೆ. ಸದರಿ ಮಹಜರಿಗೆ ನಾನು, ಸಿಬ್ಬಂದಿಗಳು, ಮತ್ತು ಸಾಕ್ಷಿದಾರರು ಸಹಿಗಳನ್ನು ಮಾಡಿರುತ್ತಾರೆ. ಸದರಿ ಮಹಜರನ್ನು ಈಗ ತೋರಿಸಿದಲ್ಲಿ ಗುರುತಿಸುತ್ತೇನೆ. ಅದನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿ.ಪಿ. 2 ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 2(ಸಿ) ಎಂದು ಗುರುತಿಸಲಾಯಿತು.

11. ಆರೋಪಿಗಳನ್ನು ಟ್ರ್ಯಾಪ್ ಮಾಡಲು ಟ್ರ್ಯಾಪ್ ತಂಡದೊಂದಿಗೆ, ಟ್ರ್ಯಾಪ್ ಪಂಚನಾಮೆ ಜರುಗಿಸಲು ಬೇಕಾದ ಸಲಕರಣೆಗಳೊಂದಿಗೆ ಬೆಳಿಗ್ಗೆ 8.45 ಗಂಟೆಗೆ ನಮ್ಮ ಇಲಾಖಾ ವಾಹನದಲ್ಲಿ ಹೊರಟೆವು. ಬೆಳಿಗ್ಗೆ 10.15 ಗಂಟೆಗೆ ತರೀಕೆರೆಯ ಎಂ.ಜಿ.ವೃತ್ತವನ್ನು ತಲುಪಿದೆವು. ನಂತರ ನಾನು ಫಿರ್ಯಾದಿಗೆ, 2 ನೇ ಆರೋಪಿ ರಮೇಶನಿಗೆ ದೂರವಾಣಿ ಮುಖಾಂತರ ಕರೆ ಮಾಡಿ, ತಹಸಿಲ್ದಾರರನ್ನು ಭೇಟಿ ಮಾಡುವ ಬಗ್ಗೆ ಕೇಳಲು ಸೂಚಿಸಿದಾಗ, ಪ್ರಾಸಾ-1, 2 ನೇ ಆರೋಪಿಗೆ ಫೋನ್ ಮಾಡಿ ವಿಚಾರಿಸಿದ್ದು, ಆಗ 2 ನೇ ಆರೋಪಿ ತಾನು ಹೊರಗಡೆ ಇದ್ದೇನೆ, ತಹಸಿಲ್ದಾರ್, ಉಪ ವಿಭಾಗಾಧಿಕಾರಿಗಳ ಮೀಟಿಂಗ್ ನಲ್ಲಿ ಇದ್ದು, ಅವರು ಮಧ್ಯಾಹ್ನ ಊಟಕ್ಕೆ ಬಂದಾಗ ಅವರ ಮನೆಗೆ ಹೋಗೋಣ, ನೀವು ಎಸ್.ಬಿ.ಎಂ. ಬ್ಯಾಂಕ್ ಹತ್ತಿರ ಇರಿ, ನಾನು ಮಧ್ಯಾಹ್ನ 1.30 ಗಂಟೆಗೆ ಎಸ್.ಬಿ.ಎಂ. ಬ್ಯಾಂಕ್ ಹತ್ತಿರ ಬರುತ್ತೇನೆ, ಅಲ್ಲಿಂದ ನಂತರ ನಾವು ತಹಸಿಲ್ದಾರ್ ಮನೆಗೆ ಹೋಗೋಣ ಎಂದು ತಿಳಿಸಿದರು ಎಂದು ಫಿರ್ಯಾದಿ ಹೇಳಿರುತ್ತಾನೆ. ನಾನು ಪ್ರಾಸಾ-1 ಮತ್ತು 2 ಇವರನ್ನು ಜೀಪಿನಿಂದ ಕೆಳಗೆ ಇಳಿಸಿ, ಪ್ರಾಯೋಗಿಕ ಮಹಜರ್ ಸಮಯದಲ್ಲಿ ನೀಡಿದ ಸೂಚನೆಗಳನ್ನು ಪುನಃ ತಿಳಿಸಿ, ಆರೋಪಿಗಳನ್ನು ಕಾಣಲು ಸೂಚಿಸಿ ಕಳುಹಿಸಿಕೊಟ್ಟೆ. ನಾನು, ನಮ್ಮ ಸಿಬ್ಬಂದಿಗಳು ಮತ್ತು ಚಾಸಾ-3 ರಾಮಚಂದ್ರನಾಯಕ, ತಹಸಿಲ್ದಾರ್

ಕೃಷ್ಣಕುಮಾರ ಇವರ ವಾಸದ ಮನೆಯ ಹೊರಗಡೆ, ಆಯಕಟ್ಟಿನ ಸ್ಥಳದಲ್ಲಿ, ಫಿರ್ಯಾದಿಯಿಂದ ಬರುವ ಸನ್ನೆಗಾಗಿ ಕಾಯುತ್ತಿದ್ದೆವು.

12. ಅದೇ ದಿನ ಮಧ್ಯಾಹ್ನ ಸುಮಾರು 1.45 ಗಂಟೆ ಸಮಯಕ್ಕೆ 1 ನೇ ಆರೋಪಿ ತಮ್ಮ ಇಲಾಖೆಯ ಜೀಪಿನಲ್ಲಿ ತಮ್ಮ ವಾಸದ ಮನೆಗೆ ಬಂದು, ತಮ್ಮ ಮನೆಗೆ ಹೋದರು. ಸದರಿ ಮನೆ ಲೊಕೋಪಯೋಗಿ ಇಲಾಖೆ ಕಟ್ಟಿದ ತಹಸಿಲ್ದಾರ್ ಗೆ ಕೊಟ್ಟ ವಸತಿ ಗೃಹವಾಗಿತ್ತು. ಸ್ವಲ್ಪ ಹೊತ್ತಿನಲ್ಲಿಯೇ ಪ್ರಾಸಾ-1 ಮತ್ತು 2 ನೇ ಆರೋಪಿ ಅಲ್ಲಿಗೆ ಬಂದು, ಅವರೂ ಸಹಾ 1 ನೇ ಆರೋಪಿಯ ಮನೆಗೆ ಹೋಗಿದ್ದಾರೆ. ನೆರಳು ಸಾಕ್ಷಿ ಪ್ರಾಸಾ-2 ಮಂಜುನಾಥ, ಅವರು 1 ನೇ ಆರೋಪಿಯ ವಾಸದ ಮನೆಯ ಎಡ ಭಾಗದ ಕಿಟಕಿಯ ಬಳಿ ನಿಂತುಕೊಂಡಿದ್ದರು. ಫಿರ್ಯಾದಿ ಮಧ್ಯಾಹ್ನ 2.15 ಗಂಟೆಗೆ ತಹಸಿಲ್ದಾರ್ ಕೃಷ್ಣಕುಮಾರ ಇವರ ವಾಸದ ಮನೆಯ ಬಳಿ ಸರ್ವೆಯರ್ ರಮೇಶ ಇವರೊಂದಿಗೆ ಹೊರಗೆ ಬಂದರು. ತಮ್ಮ ಕೈಯಿಂದ ತಮ್ಮ ಮುಖವನ್ನು ಸವರಿಕೊಳ್ಳುವ ಮೂಲಕ ಸನ್ನೆಯನ್ನು ನೀಡಿದರು. ತಕ್ಷಣ ನಾನು, ನನ್ನ ಸಿಬ್ಬಂದಿಗಳೊಂದಿಗೆ, ಮತ್ತು ಚಾಸಾ-3 ರಾಮಚಂದ್ರನಾಯಕ ಇವರೊಂದಿಗೆ, ಫಿರ್ಯಾದಿ ಮತ್ತು ನೆರಳುಸಾಕ್ಷಿದಾರರನ್ನು ಭೇಟಿ ಮಾಡಿ, ವಿಚಾರಿಸಿದೆ. ಆಗ ಪ್ರಾಸಾ-1, ಆರೋಪಿ-1 ಮತ್ತು 2 ಇವರು ತನ್ನಿಂದ ರೂ.1,00,000/- ಕೊಡುವಂತೆ ತಮ್ಮ ಕೈಯಿಂದ ಸನ್ನೆ ಮಾಡಿ, ದಿವಾನ್ ಕಾಟ್ ಮೇಲೆ ಇದ್ದ ಕಾರ್ಪೆಟ್ ಮೇಲೆ ಇಟ್ಟು, ಮುಚ್ಚುವಂತೆ ತಿಳಿಸಿದರು, ಅದರಂತೆ ರೂ.1,00,000/- ನಗದು ಹಣವನ್ನು ಅವರು ಹೇಳಿದಂತೆ ಇಟ್ಟಿದ್ದೇನೆ ಎಂದು ನನಗೆ ಹೇಳಿದರು. ತಕ್ಷಣ ನಾನು ನನ್ನ ತಂಡದವರೊಂದಿಗೆ ಸರ್ವೆಯರ್ ರಮೇಶ ಮತ್ತು ಕೃಷ್ಣಕುಮಾರ, ಇವರನ್ನು ಹಿಡಿದುಕೊಂಡೆವು.

13. ನಾನು 1 ಮತ್ತು 2 ನೇ ಆರೋಪಿತರಿಗೆ ನನ್ನ ಪರಿಚಯಿಸಿಕೊಂಡೆ. ನಾನು ಆರೋಪಿಗಳಿಗೆ ಅವರ ಹೆಸರು ಮತ್ತು ವಿಳಾಸವನ್ನು ಕೇಳಿದೆ. 1 ನೇ ಆರೋಪಿ ತನ್ನ ಹೆಸರು ಕೃಷ್ಣಕುಮಾರ, ತಹಸಿಲ್ದಾರ್, ತರೀಕೆರೆ ಎಂದು ಹೇಳಿದ, 2 ನೇ ಆರೋಪಿ ತನ್ನ ಹೆಸರನ್ನು ರಮೇಶ, ಸರ್ವೆಯರ್ ಎಂದು ತಿಳಿಸಿದರು. ಸದರಿ ಆರೋಪಿಗಳಿಗೆ ಫ್ರಾಸಾ-1 ನ್ನು ತೋರಿಸಿ, ಆತನ ಪರಿಚಯದ ಬಗ್ಗೆ ಕೇಳಲಾಗಿ, ಆರೋಪಿಗಳು, ಫ್ರಾಸಾ-1 ರ ಪರಿಚಯ ತಮಗೆ ಇದೆ ಎಂದು ಹೇಳಿದರು. ಆರೋಪಿಗಳಿಗೆ ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣದ ಬಗ್ಗೆ ಅವರಿಗೆ ತಿಳಿಸಿದೆ. ತನಿಖೆಗೆ ಸಹಕರಿಸುವಂತೆ ಅವರಿಗೆ ಕೇಳಿಕೊಂಡೆ. ಆರೋಪಿಗಳಿಗೆ ಫಿರ್ಯಾದಿಯಿಂದ ಪಡೆದ ಲಂಚದ ಹಣವನ್ನು ಎಲ್ಲಿ ಇಟ್ಟಿದ್ದೀರಿ ಎಂದು ಕೇಳಿದೆ, ಆಗ 1 ನೇ ಆರೋಪಿ, ತಮ್ಮ ವಾಸದ ಮನೆಯ ಮೊದಲನೇ ಕೊಠಡಿಯಲ್ಲಿರುವ ದಿವಾನ್ ಕಾಟ್ ಮೇಲೆ ಹಾಸಿರುವ ಕಾರ್ಪೆಟ್ಟಿನ ಮೇಲೆ ಇಟ್ಟು, ಕಾರ್ಪೆಟಿನಿಂದ ಮುಚ್ಚಲಾಗಿದೆ ಎಂದು ತಿಳಿಸಿದರು.

14. ನನ್ನ ಸೂಚನೆ ಮೇರೆಗೆ ಫ್ರಾಸಾ-2 ಮಂಜುನಾಥ, ಕಾರ್ಪೆಟ್ಟಿನ ಮುಚ್ಚಿದ ಭಾಗವನ್ನು ತೆರೆದರು, ಅಲ್ಲಿ ಲಂಚದ ಹಣ ಇಟ್ಟಿರುವುದು ಕಂಡು ಬಂದಿದೆ. ಸದರಿ ನಗದು ಹಣವನ್ನು ತೆಗೆದು ಹಾಜರುಪಡಿಸಿದರು. ಸದರಿ ಲಂಚದ ಹಣವನ್ನು ಈಗಾಗಲೇ ಬರೆದಿಟ್ಟುಕೊಂಡಿದ್ದ ಹಾಳೆಯೊಂದಿಗೆ ಪರಿಶೀಲನೆ ಮಾಡಿ ನೋಡಲಾಯಿತು, ಸದರಿ ನೋಟುಗಳಲ್ಲಿಯ ನಂಬರ್ ಗಳು ತಾಳೆಯಾಯಿತು. ನೋಟುಗಳ ಕ್ರಮ ಸಂಖ್ಯೆಗಳನ್ನು ಬರೆದುಕೊಂಡ ಮತ್ತು ದಾಳಿಯ ಸಮಯದಲ್ಲಿ ಸಿಕ್ಕಿದ ನೋಟುಗಳ ಕ್ರಮ ಸಂಖ್ಯೆಗಳೊಂದಿಗೆ ತುಲನೆ ಮಾಡಿದಾಗ ತಾಳೆಯಾದ ಹಾಳೆಯನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿ.ಪಿ. 3 ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 3(ಸಿ) ಎಂದು ಗುರುತಿಸಲಾಯಿತು. ಸದರಿ ನೋಟುಗಳಲ್ಲಿ ರೂ. 1000/-

ಮೌಲ್ಯದ 100 ನೋಟುಗಳು ಇದ್ದವು. ಸದರಿ ನೋಟುಗಳನ್ನು ಒಂದು ಕವರಿನಲ್ಲಿ ಹಾಕಿ, ಚಾಸಾ-3 ರಾಮಚಂದ್ರನಾಯಕ ಇವರಿಗೆ ಕೊಟ್ಟಂತಹ J ಎನ್ನುವ ಇಂಗ್ಲೀಷ್ ಅಕ್ಷರದ ಸೀಲನ್ನು ವಾಪಾಸು ಪಡೆದು, ಮೊಹರು ಮಾಡಿ, ಕವರನ್ನು ಅಂಟಿಸಿ, ಅದರ ಮೇಲೆ ಕೇಸಿನ ವಿವರ ಮತ್ತು ವಸ್ತುವಿನ ವಿವರ ಇರುವ ಚೀಟಿಯನ್ನು ಅಂಟಿಸಿ, ಪಂಚರ ಮತ್ತು ಫಿರ್ಯಾದಿಯ ಸಹಿ ಪಡೆದು, ಅದಕ್ಕೆ ನನ್ನ ಸಹಿ ಹಾಕಿದ್ದೇನೆ, ಅದರ ಮೇಲೆ ವಸ್ತು ಸಂ.4 ಎಂದು ಗುರುತಿಸಿದ್ದೇನೆ. ಸದರಿ ನೋಟುಗಳನ್ನು ಈಗ ನೋಡಿದಲ್ಲಿ ಗುರುತಿಸುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು, ರೂ.1000/- ಮುಖ ಬೆಲೆ 100 ನೋಟುಗಳು ಇದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಸದರಿ ಎಲ್ಲಾ ನೋಟುಗಳಿಗೆ ಸೇರಿ ಈ ಮೊದಲು ಮುದ್ದೆಮಾಲು-11 ಎಂದು ಗುರುತಿಸಲಾಗಿದೆ. (ಸ್ವತ್ತುಗಳು ಇರುವ ಭದ್ರತಾ ಪೆಟ್ಟಿಗೆಯನ್ನು ತರಿಸಿದ್ದು, ಅದರಲ್ಲಿರುವ ನೋಟುಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದಾರೆ.)

15. ಲಂಚದ ಹಣ ಇಟ್ಟ ಕಾರ್ಪೆಟ್ಟಿನ ಭಾಗವನ್ನು ನನ್ನ ಸೂಚನೆ ಮೇರೆಗೆ ಸಿಬ್ಬಂದಿ ಉಮೇಶ ಹತ್ತಿಯಿಂದ ಒರೆಸಿದ್ದು, ನಂತರ ನಮ್ಮ ಇನ್ನೊಬ್ಬ ಸಿಬ್ಬಂದಿ ಓಂಕಾರಪ್ಪ ಗಾಜಿನ ಬಟ್ಟಲಿನಲ್ಲಿ ಸೋಡಿಯಂ ಕಾರ್ಬೊನೇಟ್ ದ್ರಾವಣವನ್ನು ತಯಾರಿಸಿದರು. ಸದರಿ ದ್ರಾವಣಕ್ಕೆ ಯಾವುದೇ ಬಣ್ಣ ಇರಲಿಲ್ಲ. ಸದರಿ ಕಾರ್ಪೆಟ್ಟಿನ ಭಾಗವನ್ನು ಒರಿಸಿದ ಹತ್ತಿಯನ್ನು ಸೋಡಿಯಂ ಕಾರ್ಬೊನೇಟ್ ದ್ರಾವಣದಲ್ಲಿ ಉಮೇಶ ಅದ್ದಿದಾಗ, ಬಣ್ಣ ರಹಿತವಾದ ಸದರಿ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಬಾಟಲಿಯಲ್ಲಿ ಶೇಖರಿಸಿ, ಬಾಟಲಿಯ ಮುಚ್ಚಳವನ್ನು ಹಾಕಿ, ಬಟ್ಟೆಯನ್ನು ಸುತ್ತಿ, ದಾರದಿಂದ ಕಟ್ಟಿ, J ಎನ್ನುವ ಅಕ್ಷರದಲ್ಲಿ ಮೊಹರು ಮಾಡಿ, ಕೇಸಿನ ಮತ್ತು ವಸ್ತುವಿನ ವಿವರ ಬರೆದ ಚೀಟಿಯ ಮೇಲೆ ಪಂಚರ ಮತ್ತು ಫಿರ್ಯಾದಿಯ ಸಹಿ ಪಡೆದು, ಅದಕ್ಕೆ ನಾನು ಸಹಿ ಹಾಕಿದ್ದೇನೆ. ಸದರಿ ಚೀಟಿಯನ್ನು ಬಾಟಲಿಯ ಮೇಲೆ ಹಚ್ಚಲಾಯಿತು.

ಸದರಿ ಬಾಟಲಿಯನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ಮುದ್ದೆಮಾಲು 4 ಎಂದು ಗುರುತಿಸಲಾಗಿದೆ. ಸೋಡಿಯಂ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿದ ಹತ್ತಿಯನ್ನು ಒಂದು ಕವರಿನಲ್ಲಿ ಹಾಕಿ, ಕವರನ್ನು ಅಂಟಿಸಿ, ಅದರ ಮೇಲೆ J ಎನ್ನುವ ಇಂಗ್ಲೀಷ್ ಅಕ್ಷರದಿಂದ ಮೊಹರು ಮಾಡಲಾಯಿತು. ಕವರಿನ ಮೇಲೆ ಕೇಸಿನ ಮತ್ತು ವಸ್ತುವಿನ ವಿವರ ಬರೆದ ಚೀಟಿಯ ಮೇಲೆ ಪಂಚರ ಮತ್ತು ಫಿರ್ಯಾದಿಯ ಸಹಿ ಪಡೆದು, ಅದಕ್ಕೆ ನಾನು ಸಹಿ ಹಾಕಿದ್ದೇನೆ. ಸದರಿ ಚೀಟಿಯನ್ನು ಕವರಿನ ಮೇಲೆ ಅಂಟಿಸಲಾಯಿತು.ಸದರಿ ಹತ್ತಿಯನ್ನು ನೋಡಿದಲ್ಲಿ ಗುರುತಿಸುತ್ತೇನೆ. ಕವರಿನಲ್ಲಿರುವ ಹತ್ತಿಯನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ಮುದ್ದೆಮಾಲು 5 ಎಂದು ಗುರುತಿಸಲಾಗಿದೆ.

16. ಕಾರ್ಪೆಟ್ ಮೇಲೆ ನಗದು ಹಣ ಇಟ್ಟ ಭಾಗಕ್ಕೆ ಪೆನ್ನಿನಿಂದ ಗುರುತು ಮಾಡಿದೆ. ನನ್ನ ಸೂಚನೆ ಮೇರೆಗೆ ಓಂಕಾರಪ್ಪ ಹೊಸದಾಗಿ ಸೋಡಿಯಂ ಕಾರ್ಬೊನೇಟ್ ದ್ರಾವಣವನ್ನು ತಯಾರು ಮಾಡಿದ್ದು, ಅದಕ್ಕೆ ಯಾವುದೇ ಬಣ್ಣ ಇರಲಿಲ್ಲ. ಸದರಿ ದ್ರಾವಣದಲ್ಲಿ ಲಂಚದ ಹಣ ಇಟ್ಟ ಕಾರ್ಪೆಟ್ ಭಾಗವನ್ನು ಅದ್ದಿಸಿ ತೊಳೆದಾಗ ಬಣ್ಣ ರಹಿತವಾದ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಬಾಟಲಿಯಲ್ಲಿ ಶೇಖರಿಸಿ, ಬಾಟಲಿಯ ಮುಚ್ಚಳವಾನ್ನು ಹಾಕಿ, ಬಟ್ಟೆಯನ್ನು ಸುತ್ತಿ, ದಾರದಿಂದ ಕಟ್ಟಿ, J ಎನ್ನುವ ಅಕ್ಷರದಲ್ಲಿ ಮೊಹರು ಮಾಡಿ, ಕೇಸಿನ ಮತ್ತು ವಸ್ತುವಿನ ವಿವರ ಬರೆದ ಚೀಟಿಯ ಮೇಲೆ ಪಂಚರ ಮತ್ತು ಫಿರ್ಯಾದಿಯ ಸಹಿ ಪಡೆದು, ಅದಕ್ಕೆ ನಾನು ಸಹಿ ಹಾಕಿದ್ದೇನೆ. ಸದರಿ ಚೀಟಿಯನ್ನು ಬಾಟಲಿಯ ಮೇಲೆ ಹಚ್ಚಲಾಯಿತು. ಸದರಿ ಬಾಟಲಿಯನ್ನು ವಸ್ತು ಸಂ.8 ಎಂದು ಗುರುತಿಸಿದ್ದೇನೆ. ಅದನ್ನು ನನ್ನ ವಶಕ್ಕೆ ಪಡೆದುಕೊಂಡಿದ್ದೇನೆ. ಸದರಿ ಬಾಟಲಿಯನ್ನು ನೋಡಿದಲ್ಲಿ ಗುರುತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ಈ ಮೊದಲು ಮುದ್ದೆಮಾಲು 6 ಎಂದು ಗುರುತಿಸಲಾಗಿದೆ.

17. ಕಾರ್ಪೆಟನ್ನು ಒಂದು ಗೋಣಿ ಚೀಲದ ಒಳಗೆ ಹಾಕಿ, ಗೋಣಿ ಚೀಲವನ್ನು ದಾರದಿಂದ ಕಟ್ಟಿ ಕೇಸಿನ ಮತ್ತು ವಸ್ತುವಿನ ವಿವರಗಳನ್ನು ಒಂದು ಚೀಟಿಯಲ್ಲಿ ಬರೆದು, ಸದರಿ ಚೀಟಿಗೆ ಸಾಕ್ಷಿದಾರರು ಮತ್ತು ನನ್ನ ಸಹಿಗಳನ್ನು ಹಾಕಿ, J ಎನ್ನುವ ಇಂಗ್ಲಿಷ್ ಅಕ್ಷರದಿಂದ ಮೊಹರು ಹಾಕಲಾಯಿತು. ಸದರಿ ಚೀಲಕ್ಕೆ ವಸ್ತು ಸಂ. 9 ಎಂದು ಗುರುತಿಸಲಾಯಿತು. ಅದನ್ನು ಈಗ ನೋಡಿದಲ್ಲಿ ಗುರುತಿಸುತ್ತೇನೆ. ಸದರಿ ಗೋಣಿ ಚೀಲದಲ್ಲಿ ಇರುವ ಕಾರ್ಪೆಟ್ಟಿಗೆ ಈ ಮೊದಲು ಮುದ್ದೆ ಮಾಲು 7 ಎಂದು ಗುರುತಿಸಲಾಗಿದೆ.

18. ಕೃತ್ಯಕ್ಕೆ ಸಂಬಂಧಿಸಿದಂತೆ ನಿಮ್ಮದೇನಾದರೂ ಹೇಳುವುದು ಇದ್ದಲ್ಲಿ ಲಿಖಿತವಾಗಿ ಬರೆದುಕೊಡುವಂತೆ 1 ನೇ ಆರೋಪಿಗೆ ತಿಳಿಸಿದೆ. ಅದರಂತೆ 1 ನೇ ಆರೋಪಿ ತನ್ನ ಸಮಜಾಯಿಷಿಯನ್ನು ಬರೆದುಕೊಟ್ಟಿದ್ದಾರೆ. ಸದರಿ ಹೇಳಿಕೆಯ ಮೇಲೆ ಫಿರ್ಯಾದಿ ಮತ್ತು ಪಂಚರ ಸಹಿಗಳನ್ನು ಪಡೆದು, ಅದಕ್ಕೆ ನಾನೂ ಸಹಿ ಮಾಡಿ, ಅದನ್ನು ಮುಂದಿನ ಕ್ರಮದ ಬಗ್ಗೆ ವಶಕ್ಕೆ ಪಡೆದುಕೊಂಡಿದ್ದೇನೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿ.ಪಿ. 9 ಎಂದು ಗುರುತಿಸಲಾಗಿದೆ.ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 9(ಸಿ) ಎಂದು ಗುರುತಿಸಲಾಯಿತು.

19. ಕೃತ್ಯಕ್ಕೆ ಸಂಬಂಧಿಸಿದಂತೆ ನಿಮ್ಮದೇನಾದರೂ ಹೇಳುವುದು ಇದ್ದಲ್ಲಿ ಲಿಖಿತವಾಗಿ ಬರೆದುಕೊಡುವಂತೆ 2 ನೇ ಆರೋಪಿಗೆ ತಿಳಿಸಿದೆ. ಅದರಂತೆ 2 ನೇ ಆರೋಪಿ ತನ್ನ ಸಮಜಾಯಿಷಿಯನ್ನು ಬರೆದುಕೊಟ್ಟಿದ್ದಾರೆ. ಸದರಿ ಹೇಳಿಕೆಯ ಮೇಲೆ ಫಿರ್ಯಾದಿ ಮತ್ತು ಪಂಚರ ಸಹಿಗಳನ್ನು ಪಡೆದು, ಅದಕ್ಕೆ ನಾನೂ ಸಹಿ ಮಾಡಿ, ಅದನ್ನು ಮುಂದಿನ ಕ್ರಮದ ಬಗ್ಗೆ ವಶಕ್ಕೆ ಪಡೆದುಕೊಂಡಿದ್ದೇನೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿ.ಪಿ. 10 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 10(ಸಿ) ಎಂದು

ಗುರುತಿಸಲಾಯಿತು.

20. ಘಟನೆಯ ಬಗ್ಗೆ ಫಿರ್ಯಾದಿಗೆ ಏನು ನಡೆಯಿತು ಎಂದು ಕೇಳಿದೆ. ಆಗ ಫಿರ್ಯಾದಿ, ತಾನು 2 ನೇ ಆರೋಪಿಯೊಂದಿಗೆ 1 ನೇ ಆರೋಪಿಯ ಮನೆಗೆ ಹೋದಾಗ ಅವರು ಮಾತನಾಡುತ್ತಾ ಹಣವನ್ನು ಕೊಡುವಂತೆ ಸನ್ನೆ ಮಾಡಿದರು, ಅದರಂತೆ ತಾನು ಹಣವನ್ನು ತೆಗೆದುಕೊಡಲು ಹೋದಾಗ, ಅದನ್ನು ದಿವಾನ್ ಕಾಟ್ ಮೇಲೆ ಇಡುವಂತೆ ಕೈಯಿಂದ ಸನ್ನೆ ಮಾಡಿ ತೋರಿಸಿದರು, ನಾನು ಎಲ್ಲಿ ಇಡೋಣ ಎಂದು ಕೇಳಿದಾಗ, ಎಷ್ಟು ಸಾರಿ ಹೋಳೋದು ಮಾರಾಯ ಎಂದು ಹೇಳಿದರು, ಆಗ ನಾನು ದಿವಾನ್ ಕಾಟ್ ಮೇಲೆ ರೂ.1,00,000/- ಹಣವನ್ನು ಇಡುತ್ತಾ, ಇಲ್ಲಿ ಇಡ್ತಾ ಸಾರ್, ರೂ.1,00,000/- ಇದೆ ಎಂದು ಹೇಳಿದೆ, ಅದಕ್ಕೆ ಅವರು ರೆಕಾರ್ಡ್ ಮಾಡುತ್ತಿದ್ದೀಯೇನಪ್ಪಾ ಎಂದು ಕೇಳಿದರು, ಆಗ ನಾನು ಇಲ್ಲಾ ಸಾರ್ ಎಣಿಸಿಕೊಳ್ಳುತ್ತೀರಾ ಎಂದು ಕೇಳಿದೆ, ಅದಕ್ಕೆ ಅವರು ಪರವಾಗಿಲ್ಲ ಎಂದು ಸನ್ನೆ ಮಾಡಿದರು, ಅದರಂತೆ ನಾನು ರೂ.1,00,000/- ನಗದು ಹಣವನ್ನು ಕಾರ್ಪೆಟ್ ಮೇಲೆ ಇಟ್ಟು, ಅದನ್ನು ಮುಚ್ಚಿ ಇಟ್ಟಿದ್ದೇನೆ ಎಂದು ಹೇಳಿದ. ಅಲ್ಲದೆ, 1 ನೇ ಆರೋಪಿ ಮೊಬೈಲನ್ನು ಆನ್ ಮಾಡಿಟ್ಟಿದ್ದೀಯಾ ಎಂದು ಕೇಳಿದರು, ಅದಕ್ಕೆ ನಾನು ಇಲ್ಲ ಎಂದು ಮೊಬೈಲ್ ಫೋನನ್ನು ತೋರಿಸಿದೆ, ಅವರು ಏನೋ ಗೊತ್ತೇ ಆಗುವುದಿಲ್ಲ ಎಂದು ನನ್ನ ಮೊಬೈಲ್ ಫೋನನ್ನು ನೋಡುತ್ತಾ ಹೇಳಿದರು.

21. ನಂತರ ಈ ಬಗ್ಗೆ ನೆರಳು ಸಾಕ್ಷಿ ಮಂಜುನಾಥ ನನ್ನು ಕೇಳಿದೆ, ಅದಕ್ಕೆ ಆತ ತಾನು, 1 ನೇ ಆರೋಪಿಯ ವಾಸದ ಮನೆಯ ವರಾಂಡದ ಕಿಟಕಿಯಿಂದ ಫಿರ್ಯಾದಿ ಮತ್ತು ಆರೋಪಿ ಮಧ್ಯೆ ನಡೆದ ಸಂಭಾಷಣೆಯನ್ನು ನೋಡಿ, ಕೇಳಿಸಿಕೊಂಡಿದ್ದೇನೆ ಎಂದು ಹೇಳಿದ್ದು, ಫಿರ್ಯಾದಿ ಹೇಳಿದಂತೆ ಆತನೂ ಸಹಾ

ನುಡಿದಿದ್ದಾನೆ.

22. ನಂತರ ಫಿರ್ಯಾದಿಗೆ 1 ನೇ ಆರೋಪಿಯನ್ನು ಭೇಟಿ ಮಾಡಲು ಹೋದಾಗ ನಡೆದ ಸಂಭಾಷಣೆಯನ್ನು ಧ್ವನಿ ಮುದ್ರಿಸಲು ಕೊಟ್ಟಿದ್ದ ಡಿಜಿಟಲ್ ವಾಯ್ಸ್ ರೆಕಾರ್ಡರನ್ನು ಹಾಜರುಪಡಿಸುವಂತೆ ಕೇಳಿದಾಗ, ಅವರು ಡಿಜಿಟಲ್ ವಾಯ್ಸ್ ರೆಕಾರ್ಡರನ್ನು ಹಾಜರುಪಡಿಸಿದರು. ಸದರಿ ಡಿಜಿಟಲ್ ವಾಯ್ಸ್ ರೆಕಾರ್ಡರನಲ್ಲಿ ದಾಖಲೆಯಾದ ಆರೋಪಿಗಳ ಧ್ವನಿಯನ್ನು ಗುರುತಿಸುವ ಸಲುವಾಗಿ ತರೀಕೆರೆ ತಾಲ್ಲೂಕು ಕಛೇರಿಯ ಸರ್ವೆ ಸೂಪರ್ ವೈಸರ್(ಪರ್ಯಾವೇಕ್ಷಕರು) ಆದ ಕೆ.ಸಿ. ವಿಜಯ-ಪ್ರಾಸಾ-5, ಇವರನ್ನು ಸದರಿ ಸ್ಥಳಕ್ಕೆ ಬರಮಾಡಿಕೊಂಡೆ. ಪಂಚರ, ಫಿರ್ಯಾದಿ, ಮತ್ತು ಪ್ರಾಸಾ-5 ರ ಸಮಕ್ಷಮ ಸದರಿ ಡಿಜಿಟಲ್ ವಾಯ್ಸ್ ರೆಕಾರ್ಡರನ್ನು ಆನ್ ಮಾಡಿ, ಕೇಳಿಸಲಾಗಿ, ಫಿರ್ಯಾದಿ ತಿಳಿಸಿದಂತೆ ಸದರಿ ಡಿಜಿಟಲ್ ವಾಯ್ಸ್ ರೆಕಾರ್ಡರನಲ್ಲಿ ಧ್ವನಿ ದಾಖಲಾಗಿರುವುದು ಕಂಡು ಬಂದಿದೆ. ಅದರಲ್ಲಿ ಇರುವ ಧ್ವನಿಗಳಲ್ಲಿ ಪ್ರಾಸಾ-1 ರ ಧ್ವನಿಯನ್ನು ಪಂಚ ಸಾಕ್ಷಿಗಳು ಗುರುತಿಸಿದರು. 1 ಮತ್ತು 2 ನೇ ಆರೋಪಿಗಳ ಧ್ವನಿಯನ್ನು ಪ್ರಾಸಾ-5 ಗುರುತಿಸಿದ್ದಾರೆ. ಸದರಿ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಪ್ರತಿಲೇಖನ ಮಾಡಲಾಯಿತು. ಡಿಜಿಟಲ್ ವಾಯ್ಸ್ ರೆಕಾರ್ಡರನಲ್ಲಿದ್ದ ಧ್ವನಿಯನ್ನು ಲ್ಯಾಪ್ ಟಾಪ್ ಮುಖಾಂತರ ಸಿ,ಡಿ.ಗೆ ವರ್ಗಾಯಿಸಲಾಯಿತು. ಸದರಿ ಸಿ,ಡಿ.ಯ ಮೇಲೆ ಮಾರ್ಕರ್ ಪೆನ್ನಿನಿಂದ ಪಂಚರ ಮತ್ತು ಫಿರ್ಯಾದಿಯ ಸಹಿ ಪಡೆದು, ಅದಕ್ಕೆ ನಾನೂ ಸಹಿ ಮಾಡಿದ್ದೇನೆ. ಸದರಿ ಸಿ.ಡಿ.ಯನ್ನು ಒಂದು ಕವರಿನಲ್ಲಿ ಹಾಕಿ, ಕವರಿನ ಮೇಲೆ ಕೇಸಿನ ಮತ್ತು ವಸ್ತುವಿನ ವಿವರಗಳನ್ನು ಬರೆದ ಚೀಟಿಯನ್ನು ಅಂಟಿಸಲಾಯಿತು. ಸದರಿ ಚೀಟಿಯ ಮೇಲೆ ಪ್ರಾಸಾ-1, 2 ಮತ್ತು ಚಾಸಾ-3 ರ ಸಹಿ ಪಡೆದು, ಅದರ ಮೇಲೆ ನಾನು ಸಹಿ ಮಾಡಿದ್ದೇನೆ. ಸದರಿ ಕವರಿನ ಮೇಲೆ ವಸ್ತು ಸಂ. 10 ಎಂದು ಬರೆಯಲಾಯಿತು. ಸದರಿ ಸಿಡಿಯನ್ನು ನೋಡಿದಲ್ಲಿ

ಗುರುತಿಸುತ್ತೇನೆ. ಅದಕ್ಕೆ ಈ ಮೊದಲು ಮುದ್ದೆಮಾಲು-8 ಎಂದು ಗುರುತಿಸಲಾಗಿದೆ. ಅದನ್ನು ಕವರಿನ ಒಳಗೆ ಹಾಕಿ, ಕವರಿನ ಮೇಲೆ ಅಂಟಿಸಿದ ಚೀಟಿಗೆ ನಾನು ಸಹಿ ಹಾಕಿದ್ದೇನೆ. ಅದರಲ್ಲಿರುವ ಸಾಕ್ಷಿಯ ಸಹಿಗೆ ಮುದ್ದೆಮಾಲು 8(ಎ) ಎಂದು ಗುರುತಿಸಲಾಯಿತು.

23. ಪ್ರಾಸಾ-5 ಕೆ.ಸಿ.ವಿಜಯನಿಗೆ ಪ್ರಾಸಾ-1 ಕ್ಕೆ ಸಂಬಂಧಿಸಿದ ಕಡತ, ಮತ್ತು ತಾಲ್ಲೂಕು ಕಛೇರಿಯ ಇನ್ವರ್ಡ್ ರಿಜಿಸ್ಟರ್, ಹಾಜರಾತಿ ಪುಸ್ತಕ, ದರಕಾಸ್ತು ಪೋಡಿ ವಹಿಯನ್ನು ಸದರಿ ಸ್ಥಳಕ್ಕೆ ತರುವಂತೆ ಸೂಚಿಸಿದೆ. ಅದರಂತೆ ಪ್ರಾಸಾ-5, ನಾನು ಸೂಚಿಸಿದ ದಾಖಲಾತಿಗಳನ್ನು ತಂದು ಹಾಜರುಪಡಿಸಿದ್ದಾರೆ. ಅದರಲ್ಲಿ ಪಂಚರ ಸಮಕ್ಷಮ ಫಿರ್ಯಾದಿಗೆ ಸಂಬಂಧಪಟ್ಟ ಕಡತವನ್ನು ಪರಿಶೀಲಿಸಿದ್ದೇನೆ. ಅದು 120 ಪುಟಗಳನ್ನು ಒಳಗೊಂಡ ಕಡತವಾಗಿತ್ತು. ಅದರ ಕೊನೆಯಲ್ಲಿ ದಿನಾಂಕ 26-03-2011 ರಂದು ಬೆಳಿಗ್ಗೆ 11.00 ಗಂಟೆಗೆ ಇಡಿ ಮತ್ತು ಪೋಡಿ ಶಾಖೆಗೆ ಕೂಡಲೇ ಕ್ರಮ ಕೈಗೊಳ್ಳಲು ಕಳಿಸಿ ಎಂದು ಬರೆದು, ಸಹಿ ಮಾಡಿದ್ದು ಇರುತ್ತದೆ. ಸದರಿ 120 ಪುಟಗಳ ಮೇಲೆ ಪಂಚರ ಮತ್ತು ಫಿರ್ಯಾದಿಯ ಸಹಿ ಪಡೆದು, ಅದಕ್ಕೆ ನಾನು ಕೂಡ ಸಹಿ ಮಾಡಿದ್ದೇನೆ. ಸದರಿ ಕಡತವನ್ನು ಮುಂದಿನ ಕ್ರಮದ ಬಗ್ಗೆ ಅಮಾನತ್ತುಪಡಿಸಿಕೊಂಡಿದ್ದೇನೆ. ಸದರಿ 1 ರಿಂದ 120 ಪುಟಗಳ ಕಡತಕ್ಕೆ ಈ ಮೊದಲು ನಿ.ಪಿ. 5 ಎಂದು ಗುರುತಿಸಲಾಗಿದೆ.

24. ಇನ್ವರ್ಡ್ ರಿಜಿಸ್ಟರನ್ನು ಪರಿಶೀಲಿಸಲಾಗಿ, ಅದರಲ್ಲಿ 90 ಪುಟಗಳು ಇದ್ದು, ಅದರಲ್ಲಿ ಪುಟ ಸಂ. 73 ರಲ್ಲಿ ದಿನಾಂಕಃ 04-03-2010 ರಂದು ಪ್ರ.ಸಂ. 22273 ರಲ್ಲಿ ಪ್ರಾಸಾ-1 ಕ್ಕೆ ಸಂಬಂಧಿಸಿದಂತೆ, ದುರಸ್ತಿಮಾಡಿಕೊಡುವ ಬಗ್ಗೆ ನಮೂದು ಇರುತ್ತದೆ. ಪುಟ ಸಂ.73 ಕ್ಕೆ ಹಾಗೂ ಮೊದಲ ಮತ್ತು ಕೊನೆಯ ಪುಟಕ್ಕೆ ಪ್ರಾಸಾ-1, ಪಂಚರು, ಮತ್ತು ನನ್ನ ಸಹಿಗಳನ್ನು ಮಾಡಿ, ಅದನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಇನ್ವರ್ಡ್ ರಿಜಿಸ್ಟರನ್ನು ನೋಡುತ್ತಿದ್ದು,

ಅದಕ್ಕೆ ಈ ಮೊದಲು ನಿ.ಪಿ. 7 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಪುಟ ಸಂ. 73 ಕ್ಕೆ ನಿ.ಪಿ.7(ಎ) ಎಂದು ಗುರುತಿಸಲಾಯಿತು, ಅದರಲ್ಲಿರುವ ಕ್ರಸಂ.22273 ಕ್ಕೆ ನಿ.ಪಿ.7(ಬಿ) ಎಂದು ಗುರುತಿಸಲಾಯಿತು, ಪುಟ ಸಂ.73 ರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ.7(ಸಿ) ಎಂದು ಗುರುತಿಸಲಾಯಿತು.

25. ದರಕಾಸ್ತು ಪೋಡಿ ವಹಿಯನ್ನು ಪರಿಶೀಲಿಸಲಾಗಿ, ಅದರಲ್ಲಿ ಒಟ್ಟು 227 ಪುಟಗಳು ಇದ್ದು, ಪುಟ ಸಂ. 174 ರಲ್ಲಿ ಫಿರ್ಯಾದಿಗೆ ಸಂಬಂಧಿಸಿದಂತೆ ನಮೂದು ಇರುತ್ತದೆ, ಸದರಿ ದರಕಾಸ್ತು ಪೋಡಿ ವಹಿ ದಿನನಿತ್ಯದ ಕಾರ್ಯಕ್ರಮಕ್ಕಾಗಿ ತಮ್ಮ ಕಛೇರಿಗೆ ಬೇಕಾಗಿದ್ದು, ಎಂದು ಕೋರಿದ ಮೇರೆಗೆ ಪ್ರಾಸಾ-5 ರ ಮುಖಾಂತರ ಸದರಿ ದರಕಾಸ್ತು ವಹಿಯ ಮೊದಲ ಮತ್ತು 174 ನೇ ಪುಟ ಸಂಖ್ಯೆಯ ಹಾಳೆಯ ಜೆರಾಕ್ಸ್ ಪ್ರಮಾಣಿತ ನಕಲನ್ನು ಒದಗಿಸಿದ್ದಾರೆ. ನ್ಯಾಯಾಲಯ ಕೋರಿದಾಗ ಮೂಲ ದರಕಾಸ್ತು ವಹಿಯನ್ನು ಪರಿಶೀಲನೆಗೆ ಹಾಜರುಪಡಿಸುವಂತೆ ಸೂಚಿಸಿ, ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಅಮಾನತ್ತುಪಡಿಸಿಕೊಂಡಿದ್ದೇನೆ. ಸದರಿ ವಹಿಯ ಪುಟ ಸಂ.174 ಕ್ಕೂ ಪ್ರಾಸಾ-1, ಸಾಕ್ಷಿದಾರರು ಸಹಿ ಹಾಕಿದ್ದು ಅದಕ್ಕೆ ನಾನೂ ಸಹಾ ಸಹಿ ಹಾಕಿದ್ದೇನೆ. ಅದರಂತೆ ಪ್ರಮಾಣಿತ ನಕಲಿಗೂ ಸಹಾ ಪ್ರಾಸಾ-1, ಸಾಕ್ಷಿದಾರರು ಮತ್ತು ನಾನೂ ಸಹಾ ಸಹಿ ಹಾಕಿದ್ದೇವೆ. ಸದರಿ ಪ್ರಮಾಣಿತ ನಕಲನ್ನು ನೋಡಿದಲ್ಲಿ ಗುರುತಿಸುತ್ತೇನೆ.

(ಈ ಹಂತದಲ್ಲಿ ಮುಂದಿನ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಲಾಯಿತು.)
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

Sd/-10-02-2021

**(ಉಮೇಶ ಎಂ. ಅಡಿಗ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಚಿಕ್ಕಮಗಳೂರು.**

**ದಿನಾಂಕಃ 10-02-2020 ರಂದು ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಃ ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ.ಪಿ. ಯವರಿಂದಃ**

26. ಪೋಡಿ ವಹಿಯ ಪುಟ ಸಂ. 174 ರ ಪ್ರಮಾಣಿತ ನಕಲನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ. 47 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 47(ಎ) ಎಂದು ಗುರುತಿಸಲಾಯಿತು. (ಅದರಲ್ಲಿರುವ ಪುಟ ಸಂ.154 ಎನ್ನುವುದು ದೋಷಾರೋಪಣ ಪತ್ರ ಸಲ್ಲಿಸುವಾಗ ದಾಖಲೆಗಳಿಗೆ ತನಿಖಾಧಿಕಾರಿ ಬರೆದ ಪುಟ ಸಂಖ್ಯೆ)

27. ತರೀಕೆರೆ ತಾಲ್ಲೂಕು ಕಛೇರಿಯ ಹಾಜರಾತಿ ಪುಸ್ತಕವನ್ನು ಪರಿಶೀಲನೆ ಮಾಡಿದ್ದೇನೆ. ಸದರಿ ಪುಸ್ತಕದ ಪುಟ ಸಂ. 13 ರಲ್ಲಿ ಕ್ರ.ಸಂ.3 ರಲ್ಲಿ 2 ನೇ ಆರೋಪಿ ರಮೇಶ ದಿನಾಂಕಃ 29-04-2011 ರಂದು T ಎಂದು ನಮೂದು ಮಾಡಿರುವುದು ಕಂಡು ಬರುತ್ತದೆ. ಸದರಿ ಹಾಜರಾತಿ ಪುಸ್ತಕವನ್ನು ನೋಡುತ್ತಿದ್ದು, ಪುಸ್ತಕಕ್ಕೆ ಈ ಮೊದಲು ನಿ.ಪಿ. 6 ಎಂದು ಗುರುತಿಸಲಾಗಿದೆ, ಅದರಲ್ಲಿ ಪುಟ ಸಂ. 13 ಕ್ಕೆ ನಿ.ಪಿ. 6(ಎ) ಎಂದು ಗುರುತಿಸಲಾಗಿದೆ, ಅದರಲ್ಲಿ ಕ್ರ.ಸಂ. 3 ಕ್ಕೆ ನಿ.ಪಿ. 6(ಬಿ) ಎಂದು ಈ ಮೊದಲು ಗುರುತಿಸಲಾಗಿದೆ, ಅದಕ್ಕೆ ನಾನು ಸಹಿ ಹಾಕಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 6(ಇ) ಎಂದು ಗುರುತಿಸಲಾಯಿತು.

28. ಸೋಡಿಯಂ ಕಾರ್ಬೊನೇಟ್ ದ್ರಾವಣವನ್ನು ತಯಾರಿಸಲು ಉಪಯೋಗಿಸಿದ ಸೋಡಿಯಂ ಕಾರ್ಬೊನೇಟ್ ಪುಡಿಯನ್ನು ಮಾದರಿಗಾಗಿ ಸಣ್ಣ ಪ್ಯಾಕಿನಲ್ಲಿ ಸ್ವಲ್ಪ ಗಾತ್ರದ ಪುಡಿಯನುನ ತೆಗೆದುಕೊಂಡಿದ್ದು, ಸದರಿ ಪುಡಿಯನ್ನು ಒಂದು ಕವರಿನಲ್ಲಿ ಹಾಕಿ, ಕವರಿನ ಬಾಯಿಯನ್ನು ಅಂಟಿಸಿ, J

ಎನ್ನುವ ಇಂಗ್ಲೀಷ್ ಅಕ್ಷರದಿಂದ ಮೊಹರು ಮಾಡಿ, ಕವರಿನ ಮೇಲೆ ಈ ಕೇಸಿನ ಮತ್ತು ವಸ್ತುವಿನ ವಿವರವನ್ನು ಬರೆದ ಚೀಟಿಯನ್ನು ಅಂಟಿಸಿ, ಸದರಿ ಚೀಟಿಗೆ ಪಂಚರ ಮತ್ತು ಫಿರ್ಯಾದಿಯ ಸಹಿ ಪಡೆದುಕೊಂಡಿದ್ದು, ಅದಕ್ಕೆ ನಾನೂ ಸಹಾ ಸಹಿ ಹಾಕಿದ್ದೇನೆ. ಅದರ ಮೇಲೆ ವಸ್ತು ಸಂ.11 ಎಂದು ಗುರುತಿಸಿ, ನನ್ನ ವಶಕ್ಕೆ ಪಡೆದುಕೊಂಡಿದ್ದೇನೆ. ಸದರಿ ಕವರನ್ನು ನೋಡುತ್ತಿದ್ದು, ಅದಕ್ಕೆ ಮುದ್ದೆಮಾಲು 9 ಎಂದು ಈ ಮೊದಲು ಗುರುತಿಸಲಾಗಿದೆ.

29. ಸೋಡಿಯಂ ಕಾರ್ಬೊನೇಟ್ ದ್ರಾವಣವನ್ನು ತಯಾರಿಸಲು ಉಪಯೋಗಿಸಿದ ಡಿಸ್ಟಿಲ್ ವಾಟರಿನ ಮಾದರಿಯನ್ನು ತೆಗೆದುಕೊಂಡು ಅದನ್ನು ಒಂದು ಬಾಟಲಿಗೆ ಹಾಕಿ, ಬಟ್ಟೆಯಿಂದ ಸುತ್ತಿ, ಅದರ ಮೇಲೆ J ಎನ್ನುವ ಇಂಗ್ಲೀಷ್ ಅಕ್ಷರದಿಂದ ಮೊಹರು ಮಾಡಿ, ಬಾಟಲಿಯ ಮೇಲೆ ಈ ಕೇಸಿನ ಮತ್ತು ವಸ್ತುವಿನ ವಿವರವನ್ನು ಬರೆದ ಚೀಟಿಯನ್ನು ಅಂಟಿಸಿ, ಸದರಿ ಚೀಟಿಗೆ ಪಂಚರ ಮತ್ತು ಫಿರ್ಯಾದಿಯ ಸಹಿ ಪಡೆದುಕೊಂಡಿದ್ದು, ಅದಕ್ಕೆ ನಾನೂ ಸಹಾ ಸಹಿ ಹಾಕಿದ್ದೇನೆ. ಅದರ ಮೇಲೆ ವಸ್ತು ಸಂ.12 ಎಂದು ಗುರುತಿಸಿ, ನನ್ನ ವಶಕ್ಕೆ ಪಡೆದುಕೊಂಡಿದ್ದೇನೆ. ಸದರಿ ಬಾಟಲಿಯನ್ನು ನೋಡುತ್ತಿದ್ದು, ಅದಕ್ಕೆ ಮುದ್ದೆಮಾಲು 10 ಎಂದು ಈ ಮೊದಲು ಗುರುತಿಸಲಾಗಿದೆ.

30. ವಸ್ತುಗಳ ಮೇಲೆ ಮೊಹರು ಮಾಡಲು ಉಪಯೋಗಿಸಿದ J ಎನ್ನು ಇಂಗ್ಲಿಷ್ ಅಕ್ಷರದ ಸೀಲನ್ನು ಮಾದರಿಗಾಗಿ ಹಾಳೆಗಳ ಮೇಲೆ ಅಂಟಿಸಿ, ಸದರಿ ಹಾಳೆಗಳಿಗೆ ಪಂಚರ ಮತ್ತು ಫಿರ್ಯಾದಿಯ ಸಹಿ ಪಡೆದುಕೊಂಡಿದ್ದು, ಅದಕ್ಕೆ ನಾನೂ ಸಹಾ ಸಹಿ ಹಾಕಿದ್ದೇನೆ. ಸದರಿ ಹಾಳೆಯನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ.42 ಎಂದು ಈ ಮೊದಲು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 42(ಬಿ) ಎಂದು ಗುರುತಿಸಲಾಯಿತು. J ಎನ್ನುವ ಇಂಗ್ಲೀಷ್ ಅಕ್ಷರದ ಮೊಹರನ್ನು ಮುಂದೆ ನ್ಯಾಯಾಲಯ ಕೇಳಿದಾಗ ಹಾಜರುಪಡಿಸುವಂತೆ

ತಿಳಿಸಿ, ಚಾಸಾ-3 ರಾಮಚಂದ್ರನಾಯಕ ಇವರಿಗೆ ಅದನ್ನು ನೀಡಿದ್ದೇನೆ.

31. ಕೃತ್ಯ ನಡೆದ ಸ್ಥಳವಾದ 1 ನೇ ಆರೋಪಿ ಮನೆಯ ಕಚ್ಚಾ ನಕಾಶೆಯನ್ನು ನಾನೇ ತಯಾರಿಸಿದ್ದು, ಅದಕ್ಕೆ ಫಿರ್ಯಾದಿ, ಮತ್ತು ಪಂಚರು ಸಹಿ ಮಾಡಿದ್ದು, ನಾನೂ ಸಹಾ ಸಹಿ ಮಾಡಿದ್ದೇನೆ. ಸದರಿ ನಕಾಶೆಯನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ. 48 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 48(ಎ) ಎಂದು ಗುರುತಿಸಲಾಯಿತು.

32. ಟ್ರ್ಯಾಪ್ ಪಂಚನಾಮೆಯನ್ನು ಜರುಗಿಸುವ ಸಂದರ್ಭದಲ್ಲಿ ಸಿಬ್ಬಂದಿ ಯೋಗೀಶ ಎನ್ನುವವರಿಂದ ಫೋಟೋಗಳನ್ನು ತೆಗೆಸಿದ್ದೇನೆ. ಟ್ರ್ಯಾಪ್ ಪಂಚನಾಮೆಯನ್ನು ಮಧ್ಯಾಹ್ನ 2.30 ಗಂಟೆಯಿಂದ ಸಂಜೆ 7.30 ಗಂಟೆಯವರೆಗೆ ಜರುಗಿಸಿ, ಸದರಿ ಟ್ರ್ಯಾಪ್ ಪಂಚನಾಮೆಗೆ ಪಂಚರು ಮತ್ತು ಫಿರ್ಯಾದುದಾರರ ಮತ್ತು ಸಿಬ್ಬಂದಿಗಳ ಸಹಿಯನ್ನು ಪಡೆದು, ನಾನು ಸಹಾ ಸಹಿ ಮಾಡಿದ್ದೇನೆ. 1 ಮತ್ತು 2 ನೇ ಆರೋಪಿಗಳಿಗೆ ಸದರಿ ಪಂಚನಾಮೆಯ ಪ್ರತಿಗಳನ್ನು ಕೊಟ್ಟಿದ್ದು, 2 ನೇ ಆರೋಪಿಗೆ ಕೊಟ್ಟ ಬಗ್ಗೆ ಆತನ ಸಹಿಯನ್ನು ಪಂಚನಾಮೆಗೆ ಪಡೆದುಕೊಳ್ಳಲಾಗಿದೆ. 1 ನೇ ಆರೋಪಿಗೆ ತನ್ನ ಕೈ ನಡುಗುತ್ತಿದ್ದ ಕಾರಣ ಸಹಿ ಮಾಡಲು ಸಾಧ್ಯವಿಲ್ಲವೆಂದು ಹೇಳಿದ, ಕಾರಣ ಆತನ ಸಹಿಯನ್ನು ಪಡೆಯಲಿಲ್ಲ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿ.ಪಿ. 8 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 8(ಸಿ) ಎಂದು ಗುರುತಿಸಲಾಯಿತು.

33. 1 ಮತ್ತು 2 ನೇ ಆರೋಪಿಗಳನ್ನು ನನ್ನ ವಶಕ್ಕೆ ಪಡೆದುಕೊಂಡೆ. ಅಮಾನತ್ತುಪಡಿಸಿಕೊಂಡ ವಸ್ತುಗಳು, ಆರೋಪಿಗಳು ಮತ್ತು ಪಂಚನಾಮೆಯೊಂದಿಗೆ ಲೋಕಾಯುಕ್ತ ಪೊಲೀಸ್ ಠಾಣೆಗೆ ವಾಪಾಸು ಬಂದೆ. ಠಾಣೆಯಲ್ಲಿ ಆರೋಪಿಗಳನ್ನು ದಸ್ತಗಿರಿ ಮಾಡಿ, ದಸ್ತಗಿರಿ ಕ್ರಮ ಜರುಗಿಸಿದೆ.

ರಿಮಾಂಡ್ ಅರ್ಜಿಯೊಂದಿಗೆ 1 ಮತ್ತು 2 ನೇ ಆರೋಪಿಗಳನ್ನು ದಿನಾಂಕಃ 29-04-2011 ರಂದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡಲಾಗಿದೆ.

34. ಪ್ರಾಯೋಗಿಕ ಮತ್ತು ಟ್ರ್ಯಾಪ್ ಪಂಚನಾಮೆ ಸಮಯಕ್ಕೆ ಆರೋಪಿಗಳಿಂದ ವಶಪಡಿಸಿಕೊಂಡ ನಗದು ಹಣ ಮತ್ತು ಇತರೆ ವಸ್ತುಗಳನ್ನು ಮಾಲು ಪಟ್ಟಿ ಸಂ. 14/2011 ರಲ್ಲಿ ನಮೂದಿಸಿ, ರಾಸಾಯನಿಕ ಪರೀಕ್ಷೆಗೆ ಒಳಪಡಿಸಲು ಮತ್ತು ಅಂತಿಮ ವರದಿ ಸಲ್ಲಿಸುವವರೆಗೂ ಕೆಲವು ವಸ್ತುಗಳನ್ನು ಪೊಲೀಸ್ ವಶದಲ್ಲಿ ಇಟ್ಟುಕೊಳ್ಳಲು ಮಾನ್ಯ ನ್ಯಾಯಾಲಯದ ಅನುಮತಿಯನ್ನು ಕೋರಿದ್ದೇನೆ. ಪ್ರಾಸಾ-5 ಕೆ.ಸಿ. ವಿಜಯ ಇವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ.ಪಂಚ ಸಾಕ್ಷಿಗಳಿಗೆ ಮತ್ತು ಫಿರ್ಯಾದಿಗೆ ದಿನಾಂಕಃ 30-04-2011 ರಂದು ಬೆಳಿಗ್ಗೆ 10.00 ಗಂಟೆಗೆ ಲೋಕಾಯುಕ್ತ ಪೊಲೀಸ್ ಠಾಣೆಗೆ ಹಾಜರಾಗುವಂತೆ ಸೂಚಿಸಿ ಕಳುಹಿಸಿಕೊಟ್ಟಿದ್ದೇನೆ.

35. ದಿನಾಂಕಃ 30-04-2011 ರಂದು ಬೆಳಿಗ್ಗೆ 10.00 ಗಂಟೆಗೆ ಪಂಚ ಸಾಕ್ಷಿದಾರರು ಮತ್ತು ಫಿರ್ಯಾದಿ ಠಾಣೆಗೆ ಹಾಜರಾಗಿದ್ದು, ಅವರಿಗೆ ಪ್ರಾಯೋಗಿಕ ಮತ್ತು ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ತೆಗೆಸಲಾದ ಫೋಟೋಗಳನ್ನು ಪ್ರಿಂಟ್ ಹಾಕಿಸಿ, ಸಿ.ಡಿ. ಸಮೇತ ಹಾಜರುಪಡಿಸಿದ್ದು, ಸದರಿ ಫೋಟೋಗಳನ್ನು ಪಂಚರು ಮತ್ತು ಫಿರ್ಯಾದಿದಾರರು ನೋಡಿ ಗುರುತಿಸಿದ್ದಾರೆ. ಸದರಿ ಫೋಟೋಗಳ ಹಿಂಭಾಗದಲ್ಲಿ ಸದರಿ ಫೋಟೋಗಳನ್ನು ತೆಗೆದ ಸಂದರ್ಭಗಳನ್ನು ನಮೂದು ಮಾಡಿ, ಸದರಿ ಫೋಟೋಗಳನ್ನು ಕವರಿನಲ್ಲಿ ಹಾಕಿ, ಮುಂದಿನ ಕ್ರಮದ ಬಗ್ಗೆ ನನ್ನ ವಶಕ್ಕೆ ಪಡೆಯಲಾಗಿದೆ. ಈ ಬಗ್ಗೆ ಫೋಟೋ ಅಮಾನತ್ತು ಪಂಚನಾಮೆಯನ್ನು ಜರುಗಿಸಲಾಯಿತು. ಪಂಚನಾಮೆಯನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿ.ಪಿ. 40 ಎಂದು

ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 40(ಸಿ) ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಈಗ ನೋಡುತ್ತಿದ್ದೇನೆ. ಅವುಗಳಿಗೆ ಈ ಮೊದಲು ನಿ.ಪಿ.11 ರಿಂದ 38 ಎಂದು ಗುರುತಿಸಲಾಗಿದೆ, ಅವುಗಳ ಸಿ,ಡಿ.ಯನ್ನು ನೋಡುತ್ತಿದ್ದು, ಸದರಿ ಸಿಡಿಗೆ ಈ ಮೊದಲು ನಿ.ಪಿ. 39 ಎಂದು ಗುರುತಿಸಲಾಗಿದೆ. ಸದರಿ ವಸ್ತುಗಳನ್ನು ಮಾಲು ಪಟ್ಟಿ ಸಂ. 15/2011 ರಲ್ಲಿ ನಮೂದಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ.

36. ನಮ್ಮ ಸಿಬ್ಬಂದಿಗಳಾದ ಚಂದ್ರಶೇಖರ, ಓಂಕಾರಪ್ಪ, ಬಸವರಾಜು, ಮಹೇಶ, ಉಮೇಶ, ಯೋಗೀಶ, ಇವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿದ್ದೇನೆ.

37. ದಿನಾಂಕಃ 02-05-2011 ರಂದು 1 ನೇ ಆರೋಪಿಗೆ ಸರ್ಕಾರಿ ವಸತಿ ಗೃಹ ಮಂಜೂರು ಮಾಡಿರುವ ಬಗ್ಗೆ ಆದೇಶದ ಪ್ರತಿಯನ್ನು ದೃಢೀಕರಿಸಿ, ನನ್ನ ಕಛೇರಿಗೆ ಕಳುಹಿಸುವಂತೆ ತಹಸಿಲ್ದಾರ್ ತರೀಕೆರೆ ಇವರಿಗೆ ಪತ್ರ ಬರೆದೆ. ಸದರಿ ಪತ್ರವನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ.49 ಎಂದು ಗುರುತಿಸಲಾಯಿತು (ಅದು ಜೆರಾಕ್ಸ್ ನಕಲಾಗಿರುತ್ತದೆ) ಫಿರ್ಯಾದಿಯು 2 ನೇ ಆರೋಪಿಯನ್ನು ಮೊಬೈಲ್‌ನಿಂದ ಸಂಪರ್ಕಿಸಿದ ಬಗ್ಗೆ ಕಾಲ್ ಡಿಟೇಲ್ಸನ್ನು ಮತ್ತು ಗ್ರಾಹಕರ ಹೆಸರು ಮತ್ತು ವಿಳಾಸವನ್ನು ಸಂಬಂಧಪಟ್ಟ ಇಲಾಖೆಯಿಂದ ಕೊಡಿಸಿಕೊಡುವಂತೆ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಗೆ ಪತ್ರ ಬರೆದಿದ್ದೇನೆ.

38. 1 ನೇ ಆರೋಪಿಯನ್ನು ತಹಸಿಲ್ದಾರ್, ತರೀಕೆರೆಗೆ ನೇಮಕ ಮಾಡಿರುವ ಬಗ್ಗೆ ಮತ್ತು ಅವರ ಸೇವಾ ವಿವರಗಳನ್ನು ನೀಡುವಂತೆ, 2 ನೇ ಆರೋಪಿ ರಮೇಶನಿಗೆ ತರೀಕೆರೆ ತಾಲ್ಲೂಕು ಕಛೇರಿಯಲ್ಲಿ ಸರ್ವೆಯರ್ ಆಗಿ ನೇಮಿಸಿದ ಬಗ್ಗೆ ಮತ್ತು ಅವರ ಸೇವಾ ವಿವರಗಳನ್ನು ನೀಡುವಂತೆ ಕೋರಿ

ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು, ಜಿಲ್ಲೆ ಇವರಿಗೆ ಪತ್ರ ಬರೆದೆ. ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಮತ್ತು ಆ ಕಾರ್ಯಕ್ಕಾಗಿ ಒಬ್ಬ ಜೆ.ಇ. ಅಥವಾ ಎ.ಇ. ಅವರನ್ನು ನಿಯೋಜನೆ ಮಾಡಿ ಕಳುಹಿಸಿಕೊಡುವಂತೆ ಎ .ಇ.ಇ. ಇವರಿಗೆ ವಿನಂತಿ ಪತ್ರ ಬರೆದೆ.

39. ದಿನಾಂಕಃ05-05-2011 ರಂದು ಪಂಚನಾಮೆ ಕಾಲದಲ್ಲಿ ವಶಪಡಿಸಿಕೊಂಡ ವಸ್ತುಗಳನ್ನು ಪರೀಕ್ಷಿಸಿ ವರದಿ ನೀಡುವಂತೆ ಕೋರಿ ಸಹಾಯಕ ರಾಸಾಯನಿಕ ಪರೀಕ್ಷಕರು, ಚಿಕ್ಕಮಗಳೂರು, ಇವರಿಗೆ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು, ಹಾಸನ, ಇವರ ಮುಖಾಂತರ ಸಿಬ್ಬಂದಿ ಓಂಕಾರಪ್ಪ ಇವರಿಗೆ ಮನವಿ ಪತ್ರದೊಂದಿಗೆ ಕಳುಹಿಸಿಕೊಟ್ಟೆ.

40. ದಿನಾಂಕಃ 18-05-2011 ರಂದು 2 ನೇ ಆರೋಪಿಗೆ ಸಂಬಂಧಿಸಿದಂತೆ, ಅವರು ತರೀಕೆರೆ ತಾಲ್ಲೂಕು ಕಛೇರಿಗೆ ಭೂ ಮಾಪಕರಾಗಿ ವರ್ಗಾವಣೆಯಾದ ಬಗ್ಗೆ ಮತ್ತು ಅವರ ಸೇವಾ ವಿವರಗಳನ್ನು ತಹಸಿಲ್ದಾರ್ ದೃಢೀಕರಿಸಿ ನೀಡಿದ್ದು, ಅದನ್ನು ಸ್ವೀಕರಿಸಿದ್ದೇನೆ. 2 ನೇ ಆರೋಪಿಯ ಸೇವಾ ವಿವರವನ್ನು ಹಾಗೂ ಅವರನ್ನು ತರೀಕೆರೆ ತಾಲ್ಲೂಕು ಕಛೇರಿಗೆ ಸರ್ವೆಯರ್ ಆಗಿ ನೇಮಕ ಮಾಡಿದ ಬಗ್ಗೆ ಆದೇಶದ ನಿಜ ಪ್ರತಿಯನ್ನು ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಮಗಳೂರಿನಿಂದ ಪಡೆದುಕೊಂಡಿದ್ದೇನೆ. 2 ನೇ ಆರೋಪಿಯ ಸೇವಾ ವಿವರನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ. 50 ಎಂದು ಗುರುತಿಸಲಾಯಿತು. 2 ನೇ ಆರೋಪಿ ವರ್ಗಾವಣೆ ಆದ ಬಗ್ಗೆ ಇರುವ ಆದೇಶದ ನಿಜ ಪ್ರತಿಯನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ. 51 ಎಂದು ಗುರುತಿಸಲಾಯಿತು. 2 ನೇ ಆರೋಪಿ ತಾನು ಸರ್ವೆಯರ್ ಆಗಿ ತರೀಕೆರೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ಬಗ್ಗೆ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದಾರೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ನಿ.ಪಿ. 52 ಎಂದು ಗುರುತಿಸಲಾಯಿತು. ಅದೇ

ದಿನ ಎ.ಇ.ಇ. ಲೋಕೋಪಯೋಗಿ, ತರೀಕೆರೆ, ಇವರು ಪತ್ರ ಬರೆದಿದ್ದು, ಸಹಾಯಕ ಇಂಜಿನಿಯರ್ ಶ್ರೀನಿವಾಸ ಇವರನ್ನು ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಲು ನೇಮಿಸಿರುವುದಾದಗಿ ತಿಳಿಸಿದರು. ದಿನಾಂಕಃ 19-05-2011 ರಂದು ಕೆ.ಎಸ್,ಆರ್,ಟಿ.ಸಿ., ಚಿಕ್ಕಮಗಳೂರು, ನೆರಳು ಸಾಕ್ಷಿಯಾದ ಪ್ರಾಸಾ-2 ಮಂಜುನಾಥ ಇವರಿಗೆ ದಿನಾಂಕಃ 21-05-2011 ರಂದು ನಮ್ಮ ಕಛೇರಿಗೆ ಕಳುಹಿಸುವಂತೆ ಪತ್ರ ಬರೆದಿದ್ದೇನೆ.

41. ದಿನಾಂಕಃ 21-05-2011 ರಂದು ಪ್ರಾಸಾ-2 ಮಂಜುನಾಥ ನಮ್ಮ ಠಾಣೆಗೆ ಹಾಜರಾದರು. ಅವರನ್ನು ಸಿಬ್ಬಂದಿ ಓಂಕಾರಪ್ಪ, ಇವರೊಂದಿಗೆ ತಹಸಿಲ್ದಾರ್ ವಾಸವಾಗಿರುವ ಕೃತ್ಯ ನಡೆದ ಸ್ಥಳಕ್ಕೆ ಕಳುಹಿಸಿಕೊಟ್ಟೆ. ಅಲ್ಲಿ ಹಾಜರಿದ್ದ ಸಹಾಯಕ ಇಂಜಿನಿಯರ್ ಶ್ರೀನಿವಾಸ, ನೆರಳು ಸಾಕ್ಷಿಯಾದ ಪ್ರಾಸಾ-2, ಶ್ರೀನಿವಾಸನಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದ. ಶ್ರೀನಿವಾಸ ಆ ಸ್ಥಳದ ಕಚ್ಚಾ ನಕ್ಷೆಯನ್ನು ತಯಾರಿಸಿಕೊಂಡಿದ್ದು, ಅದನ್ನು ತನ್ನ ಮೇಲಾಧಿಕಾರಿಗಳ ಮುಖಾಂತರ ನಮ್ಮ ಕಛೇರಿಗೆ ಕಳುಹಿಸುವುದಾಗಿ ಹೇಳಿದ. ನಂತರ ಶ್ರೀನಿವಾಸ ಮತ್ತು ಪ್ರಾಸಾ-2 ನಮ್ಮ ಠಾಣೆಗೆ ವಾಪಾಸಾದರು. ಅವರಿಬ್ಬರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

42. ದಿನಾಂಕಃ 27-05-2011 ರಂದು ಓಂಕಾರಪ್ಪ, ಅಮಾನತ್ತುಪಡಿಸಿ ಕೊಂಡ ವಸ್ತುಗಳನ್ನು ಎಫ್.ಎಸ್.ಎಲ್.ಗೆ ಕೊಟ್ಟು, ಸ್ವೀಕೃತಿ ಪಡೆದುಕೊಂಡು ವರದಿ ಮಾಡಿದ್ದಾರೆ. ನಾನು ಓಂಕಾರಪ್ಪನ ಮುಂದುವರಿದ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ.

43. ದಿನಾಂಕಃ 12-07-2011 ರಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕರು, 2 ನೇ ಆರೋಪಿಯ ಮೊಬೈಲ್ ಸಂಖ್ಯೆಯ ಸಿ.ಡಿ.ಆರ್.ನ್ನು ನೀಡಿದ್ದು, ಅದನ್ನು ಸ್ವೀಕರಿಸಿದ್ದೇನೆ. ಅದೇ ರೀತಿ ಅದೇ ದಿನ ಫಿರ್ಯಾದಿಯ

ಮೊಬೈಲ್ ಫೋನಿನ ಸಿ.ಡಿ.ಆರ್.ನ್ನು ಕಳುಹಿಸಿಕೊಟ್ಟಿದ್ದು, ಅದನ್ನು ಸ್ವೀಕರಿಸಿದ್ದೇನೆ. 2 ನೇ ಆರೋಪಿಯ ಮೊಬೈಲ್ ಫೋನಿನ ಸಿ.ಡಿ.ಆರ್.ನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿ.ಪಿ. 43 ಎಂದು ಗುರುತಿಸಲಾಗಿದೆ, 2 ನೇ ಆರೋಪಿಯ ಮೊಬೈಲ್ ಫೋನಿನ ಸಿಮ್ ನಂ. 9844723158. ಫಿರ್ಯಾದಿಯ ಮೊಬೈಲ್ ಫೋನಿನ ಸಿಮ್ ನಂ.9448775639.

44. ದಿನಾಂಕಃ 05-08-2011 ರಂದು ಸಾಕ್ಷಿದಾರರಾದ ಮಧುಮತಿ, ಶಂಕರಮ್ಮ, ಮತ್ತು ತಿಮ್ಮಯ್ಯ, ಇವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

45. ದಿನಾಂಕಃ 20-09-2011 ರಂದು 1 ನೇ ಆರೋಪಿಯ ಸೇವಾ ವಿವರಗಳನ್ನು ಮತ್ತು ಅವರನ್ನು ತರೀಕೆರೆ ತಹಸಿಲ್ದಾರ್ ಎಂದು ನೇಮಕ ಮಾಡಿದ ಆದೇಶದ ಪ್ರತಿಯನ್ನು ಕೋರಿದ್ದು, ಜಿಲ್ಲಾಧಿಕಾರಿ, ಚಿಕ್ಕಮಗಳೂರು, ಇವರು ಸದರಿ ವಿವರಗಳನ್ನು ಮಹಾಲೇಖಪಾಲಕರು, ಬೆಂಗಳೂರು, ಇವರಿಗೆ ಸಲ್ಲಿಸಿದ್ದು, ಅದನ್ನು ಅಪರ ಪೊಲೀಸ್ ಮಹಾನಿರ್ದೇಶಕರ ಮೂಲಕ ನಾನು ಸ್ವೀಕರಿಸಿದ್ದೇನೆ. ಎಡಿಜಿಪಿ ಲೋಕಾಯುಕ್ತ, ಬೆಂಗಳೂರು, ಇವರು ಪತ್ರ ಬರೆದು, 1 ನೇ ಆರೋಪಿಯ ಸೇವಾ ವಿವರಗಳನ್ನು ಪರಿಶೀಲನೆಗಾಗಿ ಕಳುಹಿಸಿಕೊಟ್ಟಿದ್ದು, ಆ ಬಗ್ಗೆ ಪತ್ರ ಮತ್ತು ಇತರ ಸೇವಾ ವಿವರಗಳನ್ನು ಕೊಟ್ಟಿದ್ದಾರೆ. ಸದರಿ ದಾಖಲೆಗೆ ನಿ.ಪಿ. 53 ಎಂದು ಗುರುತಿಸಲಾಯಿತು (ಅದು ಒಟ್ಟು 4 ಪುಟಗಳಿದೆ).

46. ದಿನಾಂಕಃ 14-07-2011 ರಂದು ತಹಸಿಲ್ದಾರ್, ತರೀಕೆರೆ, ಇವರು ಪತ್ರ ಬರೆದು, 1 ನೇ ಆರೋಪಿ ತನಗೆ ನಿಗಧಿಪಡಿಸಿದ ವಸತಿ ಗೃಹದಲ್ಲಿ ವಾಸವಾಗಿರದೆ, ರಾಜಸ್ವ ನಿರೀಕ್ಷಕರು, ಕಸಬಾ ಇವರ ಹೆಸರಿಗೆ ಇರುವ ವಸತಿ ಗೃಹದಲ್ಲಿ ವಾಸವಾಗಿರುವ ಬಗ್ಗೆ ಮಾಹಿತಿಯನ್ನು ನೀಡಿದರು. ಸದರಿ ಪತ್ರವನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ. 54 ಎಂದು ಗುರುತಿಸಲಾಯಿತು.

47. ದಿನಾಂಕಃ 31-10-2011 ರಂದು ಫಿರ್ಯಾದಿದಾರರ ಕಡತ ನಿರ್ವಹಣೆ ಬಗ್ಗೆ ತಹಸಿಲ್ದಾರ್ ಕುಃರಂಜಿತ, ಇವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಕಸಬಾ ರೆವಿನ್ಯೂ ಇನ್ಸ್ ಪೆಕ್ಟರ್ ಸಿದ್ದರಾಮಪ್ಪ, ಇವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ.

48. ದಿನಾಂಕಃ 30-11-2011 ರಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಿ ಡಬ್ಲ್ಯೂ ಡಿ, ಇವರು ಶ್ರೀನಿವಾಸ ತಯಾರಿಸಿದ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ಕಳುಹಿಸಿಕೊಟ್ಟಿದ್ದರು, ಅದನ್ನು ಸ್ವೀಕರಿಸಿದ್ದೇನೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ನಿ.ಪಿ. 55 ಎಂದು ಗುರುತಿಸಲಾಯಿತು, ಅದನ್ನು ಪತ್ರದೊಂದಿಗೆ ಕಳುಹಿಸಿಕೊಟ್ಟಿದ್ದು, ಸದರಿ ಪತ್ರಕ್ಕೆ ನಿ.ಪಿ. 55(ಎ) ಎಂದು ಗುರುತಿಸಲಾಯಿತು.

49. ದಿನಾಂಕಃ 01-12-2011 ರಂದು ಪ್ರಾಯೋಗಿಕ ಪಂಚನಾಮೆಯಲ್ಲಿ ಅಮಾನತ್ತುಪಡಿಸಿಕೊಂಡ ವಸ್ತು ಸಂ. 1 ರಲ್ಲಿಯ ಸಿ,ಡಿ.ಯನ್ನು ಮಾಲು ಪಟ್ಟಿ ಸಂ. 14/2011 ರಲ್ಲಿ ನಮೂದಿಸಿದ್ದು, ಸದರಿ ಸಿ,ಡಿ.ಯಲ್ಲಿ ಆರೋಪಿಗಳ ಧ್ವನಿಯನ್ನು ಗುರುತಿಸುವ ಸಂಬಂಧ ಸದರಿ ವಸ್ತು ಸಂ. 1 ನ್ನು ತೆರೆಯಲು ಅನುಮತಿ ಕೋರಿ ನ್ಯಾಯಾಲಯಕ್ಕೆ ಕೋರಿಕೊಂಡಿದ್ದು, ನ್ಯಾಯಾಲಯ ಅನುಮತಿ ನೀಡಿದೆ.

50. ದಿನಾಂಕಃ 02-12-2011 ರಂದು ಸದರಿ ವಸ್ತು ಸಂ. 1 ರಲ್ಲಿನ ಸಿ,ಡಿ.ಯನ್ನು ತೆರೆದು ಅದರ ಧ್ವನಿಯನ್ನು ಗುರುತಿಸುವ ಸಂಬಂಧ ಸಾಕ್ಷಿದಾರರಾದ ರಾಮಚಂದ್ರನಾಯಕ, ಮಂಜುನಾಥ, ಇವರಿಗೆ ನೋಟೀಸನ್ನು ಜಾರಿ ಮಾಡಲಾಯಿತು. 1 ಮತ್ತು 2 ನೇ ಆರೋಪಿತರಿಗೆ ಠಾಣೆಗೆ ಹಾಜರಾಗುವಂತೆ ನೋಟೀಸು ಜಾರಿ ಮಾಡಲಾಯಿತು. ಸಿ.ಡಿ.ಯಲ್ಲಿನ ಧ್ವನಿಯನ್ನು ಗುರುತಿಸಲು ಅಧಿಕಾರಿ ಅಥವಾ ಸಿಬ್ಬಂದಿಯನ್ನು ನೇಮಿಸುವಂತೆ

ತಹಸಿಲ್ದಾರ್, ತರೀಕೆರೆ, ಇವರಿಗೆ ಪತ್ರ ಬರೆದೆ. ಅದೇ ದಿನ ಫಿರ್ಯಾದಿಗೆ ದಿನಾಂಕಃ 08-12-2011 ರಂದು ಠಾಣೆಗೆ ಹಾಜರಾಗುವಂತೆ ನೋಟೀಸನ್ನು ಜಾರಿ ಮಾಡಿದೆ.

51. ದಿನಾಂಕಃ 08-12-2011 ರಂದು ಸಾಕ್ಷಿದಾರರಾದ ಪ್ರಾಸಾ-1 ಮತ್ತು ಪ್ರಾಸಾ-2, ಚಾಸಾ-3 ಹಾಗೂ 1 ಮತ್ತು 2 ನೇ ಆರೋಪಿಗಳು ನಮ್ಮ ಠಾಣೆಗೆ ಹಾಜರಾದರು. ಪ್ರಾಸಾ-5 ವಿಜಯಕುಮಾರ್ ನನ್ನು ಧ್ವನಿ ಗುರುತಿಸಲು ತಹಸಿಲ್ದಾರ್, ತರೀಕೆರೆ, ನೇಮಿಸಿ ಕಳುಹಿಸಿದ್ದರು. ಅವರೆಲ್ಲರೂ ಬೆಳಿಗ್ಗೆ 10.30 ಗಂಟೆಗೆ ನನ್ನ ಮುಂದೆ ಹಾಜರಾದರು. ಅವರೆಲ್ಲರಿಗೂ ವಸ್ತು ಸಂ. 1 ರ ಬಗ್ಗೆ ತಿಳಿಸಿ, ನ್ಯಾಯಾಲಯದ ಅನುಮತಿ ಪಡೆದ ಬಗ್ಗೆ, ನ್ಯಾಯಾಲಯದ ಜ್ಞಾಪನಾ ಪ್ರತಿಯನ್ನು ತೋರಿಸಿ, ವಸ್ತು ಸಂ. 1 ನ್ನು ತೆರೆದು ನೋಡಲಾಗಿ, ಅದರಲ್ಲಿದ್ದ ಸಿ.ಡಿ.ಯನ್ನು ಲ್ಯಾಪ್ ಟಾಪ್ ಗೆ ಹಾಕಿ, ಕೇಳಿಸಲಾಯಿತು. ಸದರಿ ಸಿಡಿಯಲ್ಲಿನ ಸಂಭಾಷಣೆಯಲ್ಲಿದ್ದ ಧ್ವನಿಯಲ್ಲಿ ಒಂದು ಧ್ವನಿಯನ್ನು 2 ನೇ ಆರೋಪಿ ರಮೇಶನ ಧ್ವನಿ ಎಂದು, ಇನ್ನೊಂದು ಧ್ವನಿಯನ್ನು 1 ನೇ ಆರೋಪಿಯ ಧ್ವನಿ ಎಂದು ಪ್ರಾಸಾ-5 ವಿಜಯಕುಮಾರ ಗುರುತಿಸಿದ್ದಾರೆ. ಫಿರ್ಯಾದಿದಾರರೂ ಸಹಾ ತಮ್ಮ ಧ್ವನಿಯನ್ನು ಗುರುತಿಸಿದ್ದಾರೆ. ಪ್ರಾಸಾ-5 ಫಿರ್ಯಾದಿದಾರನ ಧ್ವನಿಯನ್ನು ಗುರುತಿಸಿದ್ದಾರೆ. ಸದರಿಯವರು ಧ್ವನಿಗಳನ್ನು ಗುರುತಿಸಿದ ಮೇರೆಗೆ ಸಂಭಾಷಣೆಯನ್ನು ಪ್ರತಿಲೇಖನ ಮಾಡಲಾಯಿತು. ಸದರಿ ಪ್ರತಿಲೇಖನದಲ್ಲಿ ಪ್ರಾಸಾ-1 ಹಾಗೂ 1 ಮತ್ತು 2 ನೇ ಆರೋಪಿಗಳ ಮಧ್ಯೆ ನಡೆದ ಮಾತುಕತೆಯನ್ನು ಕಾಣಿಸಲಾಗಿದೆ. ಧ್ವನಿ ಮುದ್ರಣವಾದ ಸದರಿ ಸಂಭಾಷಣೆಯಲ್ಲಿ 1 ಮತ್ತು 2 ನೇ ಆರೋಪಿಗಳು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದು ಗೊತ್ತಾಗುತ್ತದೆ.

52. ಈ ಬಗ್ಗೆ 1 ನೇ ಆರೋಪಿಯನ್ನು ಕೇಳಲಾಗಿ, ಅವರು ಸಿಡಿಯನ್ನು ಪ್ಲೇ

ಮಾಡಿದಾಗ ಅದರಲ್ಲಿ ಮಾತುಕತೆ ಸರಿಯಾಗಿ ಕೇಳಿಸುತ್ತಿಲ್ಲ ಎಂದು ತಿಳಿಸಿದರು. ಪಂಚರನ್ನು ಮತ್ತು ಪ್ರಾಸಾ-5 ನ್ನು ಕೇಳಿದಾಗ, ಅವರು ಯಾವುದೇ ಗದ್ದಲ ಇರುವುದಿಲ್ಲ, ಹಾಗೂ ಧ್ವನಿಯನ್ನು ಸಹಜವಾಗಿ ಗುರುತಿಸಬಹುದು ಎಂದು ಹೇಳಿದ್ದಾರೆ. 2 ನೇ ಆರೋಪಿಯನ್ನು ಕೇಳಲಾಗಿ, ಅವರು ಧ್ವನಿ ತಮ್ಮದು ಇರಬಹುದು ಎಂದು ತಿಳಿಸಿದ್ದಾರೆ. ಪ್ರಾಸಾ-5 ನ್ನು ಕೇಳಿದಾಗ ಅವರು ಅದು 2 ನೇ ಆರೋಪಿಯ ಧ್ವನಿ ಎಂದು ಸ್ಪಷ್ಟವಾಗಿ ಗುರುತಿಸಿದ್ದಾರೆ. ಫಿರ್ಯಾದಿಯನ್ನು ಕೇಳಲಾಗಿ, ಅವರು ತಮ್ಮ ಮತ್ತು 1 ಹಾಗೂ 2 ನೇ ಆರೋಪಿಗಳ ಧ್ವನಿಯನ್ನು ಗುರುತಿಸಿದ್ದಾರೆ. ಸದರಿ ಸಿಡಿಯನ್ನು ಈ ಹಿಂದೆ ಸೀಲು ಮಾಡಿದ್ದ ಕವರಿಗೆ ಹಾಕಿ, ಸದರಿ ಕವರನ್ನು ಇನ್ನೊಂದು ಕವರಿಗೆ ಹಾಕಿ, ಆ ಕವರಿನ ಮೇಲೆ ವಸ್ತು ಸಂ. 1 ಎಂದು ಬರೆದು, ಚಾಸಾ-3 ರಾಮಚಂದ್ರನಾಯಕ ಅವರಿಂದ J ಎನ್ನುವ ಅಕ್ಷರದ ಸೀಲನ್ನು ಪಡೆದುಕೊಂಡು, ಪುನಃ ಅರಗಿನಿಂದ ಸದರಿ ಕವರಿನ ಮೇಲೆ ಮೊಹರು ಮಾಡಲಾಯಿತು. ಅದರ ಮೇಲೆ ಪುನಃ ವಸ್ತು ಸಂ. 1 ಎಂದು ನಮೂದಿಸಲಾಯಿತು. ಈ ಬಗ್ಗೆ ವಸ್ತುವಿನ ಮತ್ತು ಕೇಸಿನ ವಿವರಗಳನ್ನು ಚೀಟಿಯಲ್ಲಿ ಬರೆದು, ಸದರಿ ಚೀಟಿಗೆ ಫಿರ್ಯಾದಿದಾರರು, ಮತ್ತು ಪಂಚ ಸಾಕ್ಷಿಗಳ ಮತ್ತು ಪ್ರಾಸಾ-5 ರ ಸಹಿಗಳನ್ನು ಪಡೆದು, ಸದರಿ ಚೀಟಿಯನ್ನು ಕವರಿಗೆ ಅಂಟಿಸಲಾಯಿತು, ಸದರಿ ಕವರನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಅದರ ಮೇಲೆ J ಎನ್ನುವ ಇಂಗ್ಲೀಷ್ ಅಕ್ಷರದ ಮೊಹರು ಹಾಕಲಾಯಿತು. ಸದರಿ J ಎಂದು ಬರೆದ ಮೊಹರನ್ನು ಚಾಸಾ-3 ರಾಮಚಂದ್ರನಾಯಕ ಇವರಿಗೆ ಕೊಟ್ಟು, ನ್ಯಾಯಾಲಯ ಆದೇಶಿಸಿದ ಹಾಜರುಪಡಿಸುವಂತೆ ಸೂಚಿಸಿ, ಅವರಿಂದ ಸ್ವೀಕೃತಿಯನ್ನು ಪಡೆದುಕೊಂಡಿದ್ದೇನೆ. ಈ ಬಗ್ಗೆ ಬೆಳಿಗ್ಗೆ 10.45 ರಿಂದ ಮಧ್ಯಾಹ್ನ 2.30 ಗಂಟೆಯವರೆಗೆ ಧ್ವನಿ ಗುರುತಿಸಿದ ಬಗ್ಗೆ ಮಹಜರ್ ಕ್ರಮ ಜರುಗಿಸಿದ್ದೇನೆ. ಸದರಿ ಮಹಜರನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ. 41 ಎಂದು

ಈ ಮೊದಲು ಗುರುತಿಸಲಾಗಿದೆ. ಅದಕ್ಕೆ ಫಿರ್ಯಾದಿ, ಪಂಚ ಸಾಕ್ಷಿದಾರರು, ನಮ್ಮ ಠಾಣೆಯ ಸಿಬ್ಬಂದಿಗಳು ಮತ್ತು ಪ್ರಾಸಾ-5 ಇವರ ಸಹಿ ಪಡೆದಿದ್ದು, ನಾನು ಸಹಾ ಸಹಿ ಹಾಕಿದ್ದೇನೆ. ಸಾಕ್ಷಿಯ ಸಹಿಗೆ ನಿ.ಪಿ. 41(ಡಿ) ಎಂದು ಗುರುತಿಸಲಾಯಿತು. ಸದರಿ ಮಹಜರಿನ ನಕಲನ್ನು ಇಬ್ಬರು ಆರೋಪಿಗಳಿಗೆ ನೀಡಿ, ಅದನ್ನು ಸ್ವೀಕರಿಸಿದ ಬಗ್ಗೆ ಅವರ ಸಹಿಗಳನ್ನು ಮಹಜರಿಗೆ ಪಡೆದಿರುತ್ತೇನೆ. ಪುನಃ ಪ್ಯಾಕ್ ಮಾಡಿದ ಸಿಡಿ ಹಾಕಿದ ಕವರಿಗೆ ಮುದ್ದೆಮಾಲು 1(ಎ) ಎಂದು ಈ ಮೊದಲು ಗುರುತಿಸಲಾಗಿದೆ. ಅದರ ಮೇಲೆ ನನ್ನ ಸಹಿ ಇದ್ದು, ಸಾಕ್ಷಿಯ ಸಹಿಗೆ ಮುದ್ದೆಮಾಲು 1(ಬಿ) ಎಂದು ಗುರುತಿಸಲಾಯಿತು. ಪ್ರಾಸಾ-1,2, ಚಾಸಾ-3 ಮತ್ತು ಪ್ರಾಸಾ-5, ಇವರ ಮುಂದುವರಿದ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಆ ದಿನ ತಯಾರಿಸಿದ ಪಂಚನಾಮೆಯ ಮೂಲ ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

53. 2 ನೇ ಆರೋಪಿಗೆ ಕರ್ತವ್ಯ ಹಂಚಿಕೆ ಮಾಡಿದ ಬಗ್ಗೆ ದಾಖಲೆಯನ್ನು ಕೇಳಿದ್ದು, ಅದಕ್ಕೆ ಉತ್ತರವಾಗಿ ಅವರಿಗೆ ಕರ್ತವ್ಯ ಹಂಚಿಕೆ ಮಾಡಿದ ಬಗ್ಗೆ ಪತ್ರದೊಂದಿಗೆ ಆದೇಶದ ನಕಲನ್ನು ಲಗತ್ತುಪಡಿಸಿ ಕಳುಹಿಸಿದ್ದಾರೆ. ಸದರಿ ಪತ್ರವನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ. 56 ಎಂದು ಗುರುತಿಸಲಾಯಿತು. ಅದರಲ್ಲಿ ಒಟ್ಟು 3 ಪುಟಗಳು ಇದೆ.

(ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದ ಕಾರಣ, ಮುಂದಿನ ಮುಖ್ಯ ವಿಚಾರಣೆಗೆ ಸಮಯ ನೀಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

Sd/-10-02-2020
**(ಉಮೇಶ ಎಂ. ಅಡಿಗ)**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಮಗಳೂರು.**

ಸಾಕ್ಷಿ ಸಹಿಃ ಚ

**<u>ದಿನಾಂಕಃ 09-03-2020 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಃಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ.ಪಿ. ಯವರಿಂದಃ</u>**

54. ದಿನಾಂಕಃ 31-01-2012 ರಂದು ಸಿಬ್ಬಂದಿಯಾದ ಉಮೇಶ, ಇವರು, ಸೀಲಾಗಿದ್ದ ಎಫ್.ಎಸ್.ಎಲ್. ವರದಿ ಮತ್ತು ವಸ್ತುಗಳನ್ನು ಪೊಲೀಸ್ ಅಧೀಕ್ಷಕರು, ಲೋಕಾಯುಕ್ತ, ಹಾಸನ, ಇವರಿಗೆ ನೀಡಿ ಬಂದಿರುವುದಾಗಿ ಮೌಖಿಕವಾಗಿ ನನಗೆ ವರದಿ ಮಾಡಿದರು. ನಾನು ಅವರ ಮುಂದುವರಿದ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ.

55. ದಿನಾಂಕಃ 07-02-2012 ರಂದು ಸಿಬ್ಬಂದಿಯಾದ ವೈ.ಎಲ್. ಓಂಕಾರಪ್ಪ, ಸದರಿ ಎಫ್.ಎಸ್.ಎಲ್. ವರದಿ ಮತ್ತು ವಸ್ತುಗಳನ್ನು, ಪೊಲೀಸ್ ಅಧೀಕ್ಷಕರು, ಲೋಕಾಯುಕ್ತ, ಹಾಸನ, ಇವರಿಂದ ಜ್ಞಾಪನಾ ಪತ್ರದೊಂದಿಗೆ ತಂದು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿದ್ದೇನೆ. ಅಲ್ಲದೆ, ಓಂಕಾರಪ್ಪ ಇವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿದ್ದೇನೆ. ಕೆಮಿಕಲ್ ಎಕ್ಸಾಮಿನರ್, ಇವರ ವರದಿಯನ್ನು ಪಡೆದುಕೊಂಡಿದ್ದು, ಅದಕ್ಕೆ ನಿ.ಪಿ. 57 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 57(ಎ) ಎಂದು ಗುರುತಿಸಲಾಯಿತು.

56. ದಿನಾಂಕಃ29-04-2011 ರಂದು ತರೀಕೆರೆ ಉಪ ವಿಭಾಗಾಧಿಕಾರಿಗಳ ಕಛೇರಿಯಲ್ಲಿ ನಡೆಸಿದ ಮೀಟಿಂಗ್ ಬಗ್ಗೆ ಮತ್ತು ಸದರಿ ಮೀಟಿಂಗ್‌ಗೆ ಹಾಜರಾದ ಅಧಿಕಾರಿಗಳ ಬಗ್ಗೆ ಮಾಹಿತಿ ನೀಡುವಂತೆ ದಿನಾಂಕಃ 16-04-2012 ರಂದು ಪತ್ರ ಬರೆಯಲಾಯಿತು. ಸದರಿ

ಪತ್ರವನ್ನು ಈಗ ನೋಡುತ್ತಿದ್ದು, ಅದರ ನಕಲಿಗೆ ನಿ.ಪಿ. 58 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 58(ಎ) ಎಂದು ಗುರುತಿಸಲಾಯಿತು, ಅದು ಜೆರಾಕ್ಸ್ ನಕಲಾಗಿದ್ದು, ಮೂಲ ಪತ್ರವನ್ನು ಸ್ವೀಕರಿಸಿದ ಬಗ್ಗೆ ಅದಕ್ಕೆ ಸ್ವೀಕೃತಿ ಕಛೇರಿಯ ಮೊಹರು ಮತ್ತು ಸಹಿ ಇರುತ್ತದೆ, ಕಾರಣ ಅದಕ್ಕೆ ನಿಶಾನೆ ನೀಡಲಾಗಿದೆ. ಅದೇ ದಿನ ತರೀಕೆಗೆ ತಹಸಿಲ್ದಾರ್, ಅವರಿಗೆ ಮೊದಲನೇ ಆರೋಪಿ ಉಪಯೋಗಿಸುತ್ತಿದ್ದ ಇಲಾಖಾ ವಾಹನದ ಬಗ್ಗೆ ಮಾಹಿತಿ ಮತ್ತು ಏಪ್ರಿಲ್ 2011 ನೇ ಸಾಲಿನ ಲಾಗ್ ಪುಸ್ತಕದ ದೃಢೀಕೃತ ನಕಲನ್ನು ನೀಡುವಂತೆ, ಮತ್ತು ಆ ಸಮಯದಲ್ಲಿ ಅವರ ವಾಹನಕ್ಕೆ ನೀಡಲಾದ ಚಾಲಕರ ಹೆಸರು ಮತ್ತು ವಿಳಾಸವನ್ನು ಒದಗಿಸಿಕೊಡುವಂತೆ ವಿನಂತಿ ಪತ್ರವನ್ನು ಕಳುಹಿಸಿದ್ದೇನೆ. ಸದರಿ ವಿನಂತಿ ಪತ್ರವನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ. 59 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 59(ಎ) ಎಂದು ಗುರುತಿಸಲಾಯಿತು, ಅದು ಜೆರಾಕ್ಸ್ ನಕಲಾಗಿದ್ದು, ಮೂಲ ಪತ್ರವನ್ನು ಸ್ವೀಕರಿಸಿದ ಬಗ್ಗೆ ಅದಕ್ಕೆ ಸ್ವೀಕೃತಿ ಕಛೇರಿಯ ಮೊಹರು ಮತ್ತು ಸಹಿ ಇರುತ್ತದೆ, ಕಾರಣ ಅದಕ್ಕೆ ನಿಶಾನೆ ನೀಡಲಾಗಿದೆ.

57. ದಿನಾಂಕಃ 21-04-2012 ರಂದು ತರೀಕೆರೆ ತಾಲ್ಲೂಕು ಕಛೇರಿಯಿಂದ 1 ನೇ ಆರೋಪಿಗೆ ಹಂಚಿಕೆಯಾದ ಇಲಾಖಾ ವಾಹನ ಸಂ. ಕೆಎ-18/ಜಿ-689 ಟಾಟಾ ಸುಮೋ ತರಹದ ವಾಹನ ಎಂದು ಮಾಹಿತಿ ಸಿಕ್ಕಿದೆ. ಸದರಿ ವಾಹನದ ಏಪ್ರಿಲ್ 2011 ರ ತಿಂಗಳಿನ ವಾಹನದ ಲಾಗ್ ಪುಸ್ತಕದ ದೃಢೀಕೃತ ಪ್ರತಿಯನ್ನು ಕೊಟ್ಟಿದ್ದಾರೆ. ಅದರೊಂದಿಗೆ ಪತ್ರವನ್ನು ಕಳುಹಿಸಿದ್ದು, ಸದರಿ ಪತ್ರಕ್ಕೆ ನಿ.ಪಿ. 60 ಎಂದು ಗುರುತಿಸಲಾಯಿತು.

ಅದರೊಂದಿಗೆ ಕಳುಹಿಸಿದ ದೃಢೀಕೃತ ಪ್ರತಿಯನ್ನು ನೋಡುತ್ತಿದ್ದು, ಅವುಗಳು ಒಟ್ಟು 5 ಪುಟಗಳಿದ್ದು, ಅವುಗಳಿಗೆ ಒಟ್ಟಿಗೆ ನಿ.ಪಿ. 60(ಎ) ಎಂದು ಗುರುತಿಸಲಾಯಿತು, ಅದನ್ನು ಸ್ವೀಕರಿಸಿದ ಬಗ್ಗೆ ಪತ್ರದ ಮೇಲೆ ನಾನು ಸಹಿ ಮಾಡಿದ್ದು, ಸದರಿ ಸಹಿಗೆ ನಿ.ಪಿ. 60(ಬಿ) ಎಂದು ಗುರುತಿಸಲಾಯಿತು. ನನ್ನ ಸೂಚನೆ ಮೇರೆಗೆ 1 ನೇ ಆರೋಪಿಗೆ ಜೀಪ್ ಚಾಲಕನಾದ ಕೆ ಆರ್ ಜಯಪ್ಪ ಠಾಣೆಗೆ ಹಾಜರಾಗಿದ್ದು, ಅವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಕೆ.ಆರ್ ಜಯಪ್ಪನಿಗೆ ಕಣ್ಣಿನ ದೃಷ್ಟಿ ದೋಷವಿದ್ದ ಕಾರಣ, ಅವರ ಬದಲಿಗೆ ಧನಂಜಯ ಎನ್ನುವ ಗ್ರಾಮ ಸಹಾಯಕರನ್ನು ದಿನಾಂಕಃ 29-04-2011 ರಂದು ಮೌಖಿಕ ಆದೇಶದ ಮೇರೆಗೆ ನೇಮಿಸಿಕೊಂಡಿರುವ ಬಗ್ಗೆ ಅವರು ತಿಳಿಸಿದ್ದಾರೆ. ನನ್ನ ಸೂಚನೆ ಮೇರೆಗೆ ಧನಂಜಯ ಠಾಣೆಗೆ ಹಾಜರಾಗಿದ್ದು, ಅವರನ್ನು ಸಹಾ ವಿಚಾರಣೆ ಮಾಡಿ, ಅವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ದಿನಾಂಕಃ 29-04-2011 ರಂದು 1 ನೇ ಆರೋಪಿಯ ಮೌಖಿಕ ಆದೇಶದ ಮೇರೆಗೆ ಅವರು ವಾಹನ ಚಲಾಯಿಸಿದ್ದರಿಂದ ದಿನಾಂಕಃ 29-04-2011 ರಂದು ಲಾಗ್ ಪುಸ್ತಕಕ್ಕೆ ಸಾಕ್ಷಿ ಎಂದು ಧನಂಜಯ ಸಹಿ ಹಾಕಿದ್ದಾರೆ.

58. ದಿನಾಂಕಃ 28-04-2012 ರಂದು ನನ್ನ ಸೂಚನೆ ಮೇರೆಗೆ, ತಿಮ್ಮಯ್ಯ, ತಹಸಿಲ್ದಾರ್, ಉಪ ವಿಭಾಗಾಧಿಕಾರಿಗಳ ಕಛೇರಿ, ತರೀಕೆರೆ, ಇವರು ಹಾಜರಾಗಿದ್ದು, ಅವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ.

59. ದಿನಾಂಕಃ 05-05-2012 ರಂದು ತರೀಕೆರೆ ತಾಲ್ಲೂಕು ಕಛೇರಿಯಲ್ಲಿ ಪ್ರ.ದ. ಸ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಬೋರಯ್ಯ, ಇವರು ಠಾಣೆಗೆ ಹಾಜರಾಗಿದ್ದು, ಅವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ.

60. ದಿನಾಂಕಃ 21-04-2012 ರಂದು ತರೀಕೆರೆ ಉಪ ವಿಭಾಗಾಧಿಕಾರಿಗಳ ಕಛೇರಿಯಿಂದ ಕಳುಹಿಸಿಕೊಟ್ಟ ಮಾಹಿತಿಯನ್ನು ಸ್ವೀಕರಿಸಿದ್ದೇನೆ. ಅದರೊಂದಿಗೆ ಏಪ್ರಿಲ್-2011 ರ ದಿನಚರಿಯನ್ನು ಕಳುಹಿಸಿಕೊಟ್ಟಿದ್ದು, ಅವುಗಳು 3 ಪುಟಗಳು ಇದೆ, ಅವುಗಳಿಗೆ ಒಟ್ಟಿಗೆ ನಿ.ಪಿ. 61 ಎಂದು ಗುರುತಿಸಲಾಯಿತು, ಅದನ್ನು ಸ್ವೀಕರಿಸಿದ ಬಗ್ಗೆ ನಾನು ಸಹಿ ಹಾಕಿದ್ದು, ಸಾಕ್ಷಿಯ ಸಹಿಗೆ ನಿ.ಪಿ.61(ಎ) ಎಂದು ಗುರುತಿಸಲಾಯಿತು.

61. ದಿನಾಂಕಃ 25-06-2012 ರಂದು ಆರೋಪಿತರ ವಿರುದ್ಧ ಅಂತಿಮ ವರದಿಯನ್ನು ತಯಾರಿಸಿ, ಸಕ್ಷಮ ಪ್ರಾಧಿಕಾರದಿಂದ ಅಭಿಯೋಜನಾ ಮಂಜೂರಾತಿ ತರಿಸಿಕೊಡುವಂತೆ ಕೋರಿ ಎ.ಡಿ.ಜಿ.ಪಿ. ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ಕಳುಹಿಸಿಕೊಟ್ಟಿದ್ದೇನೆ.

62. ದಿನಾಂಕಃ 12-03-2013 ರಂದು ಎ.ಡಿ.ಜಿ.ಪಿ. ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಜ್ಞಾಪನದೊಂದಿಗೆ 1 ಮತ್ತು 2 ನೇ ಆರೋಪಿಗಳ ವಿರುದ್ಧ ಅಭಿಯೋಜನಾ ಮಂಜೂರಾತಿ ಆದೇಶವನ್ನು ಪಡೆದು ನನಗೆ ಕಳುಹಿಸಿಕೊಟ್ಟರು, ಅದನ್ನು ಸ್ವೀಕರಿಸಿದ್ದೇನೆ. ಸದರಿ ಮಂಜೂರಾತಿ ಆದೇಶಗಳು ಬೇರೆ ಬೇರೆ ಯಾಗಿದ್ದು, ಒಟ್ಟಿಗೆ ಕಳುಹಿಸಿಕೊಡಲಾಗಿದೆ. ಅವುಗಳನ್ನು ಈಗ ನೋಡಿದಲ್ಲಿ ಗುರುತಿಸುತ್ತೇನೆ. 2 ನೇ ಆರೋಪಿಯ ಮಂಜೂರಾತಿ ಆದೇಶಕ್ಕೆ ಈ ಮೊದಲು ನಿ.ಪಿ.44 ಎಂದು ಗುರುತಿಸಲಾಗಿದೆ. 1 ನೇ ಆರೋಪಿಯ ಮಂಜೂರಾತಿ ಆದೇಶಕ್ಕೆ ಈ ಮೊದಲು ನಿ.ಪಿ. 45 ಎಂದು ಗುರುತಿಸಲಾಗಿದೆ.

63. ದಿನಾಂಕಃ 13-03-2013 ರಂದು ಆರೋಪಿಗಳ ವಿರುದ್ಧ ದೋಷಾರೋಪಣ ಪಟ್ಟಿಯನ್ನು ತಯಾರಿಸಿ, ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾಸನ, ಇವರಿಗೆ ಕಳುಹಿಸಿಕೊಟ್ಟಿದ್ದೇನೆ.

64. ದಿನಾಂಕಃ 28-03-2013 ರಂದು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾಸನ, ಇವರು ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಿ, ವಾಪಾಸು ನೀಡಿದ್ದು, ಅದನ್ನು ಪಡೆದುಕೊಂಡಿದ್ದೇನೆ.

65. ದಿನಾಂಕಃ10-04-2013 ರಂದು ಆರೋಪಿತರ ವಿರುದ್ಧ ಘನ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ.

**ಪಾಟೀ ಸವಾಲುಃ1 ನೇ ಆರೋಪಿ ಪರಃಶ್ರೀಬಿಎಂ.ಎಲ್.ಜಿ. ವಕೀಲರಿಂದ**

66. ಗುರುತನ್ನು ಖಚಿತಗೊಳಿಸಿಕೊಳ್ಳುವ ಬಗ್ಗೆ ನಾನು ಫಿರ್ಯಾದಿಯ ಗುರುತಿನ ಚೀಟಿಯನ್ನು, ಪಡಿತರ ಚೀಟಿ ಅಥವಾ ಶಾಲೆಯ ಪ್ರಮಾಣ ಪತ್ರವನ್ನು ಪಡೆದುಕೊಂಡಿಲ್ಲ. ಪಿನಾಪ್ತಲಿನ್ ಪುಡಿ ಮತ್ತು ಸೋಡಿಯಂ ಕಾರ್ಬೊನೇಟ್ ಪುಡಿಯನ್ನು ನಮ್ಮ ಇಲಾಖೆಯಿಂದಲೇ ನಮ್ಮ ಕಛೇರಿಗೆ ಸರಬರಾಜು ಮಾಡಲಾಗಿದೆ, ಆ ರೀತಿ ಸರಬರಾಜು ಮಾಡಲಾದ ಬಗ್ಗೆ, ಅದರ ದಿನಾಂಕ ಕಛೇರಿಯ ದಾಖಲೆಗಳಲ್ಲಿ ಇರಬಹುದು, ಈ ದಿನ ಅದನ್ನು ತಂದಿಲ್ಲ. ಸದರಿ ಪಿನಾಪ್ತಲಿನ್ ಪುಡಿ ಮತ್ತು ಸೋಡಿಯಂ ಕಾರ್ಬೊನೇಟ್ ಪುಡಿಯನ್ನು ತಯಾರಿಸಿದ ದಿನಾಂಕ ಮತ್ತು ಅದರ expiry ದಿನಾಂಕ ದಾಖಲೆ ನೋಡಿದಲ್ಲಿ ಮಾತ್ರ ಹೇಳಬಹುದು. ದೋಷಾರೋಪಣ ಪತ್ರದೊಂದಿಗೆ ಅಂತಹ ದಾಖಲೆಗಳನ್ನು

ಹಾಜರುಪಡಿಸಿಲ್ಲ, ಹಾಗೂ ಈ ದಿನವೂ ಸಹಾ ಆ ದಾಖಲೆ ನನ್ನ ಬಳಿ ಇಲ್ಲ. ಲೋಕಾಯುಕ್ತ ಕಛೇರಿ, ಚಿಕ್ಕಮಗಳೂರಿನಲ್ಲಿ ಯಾವುದಾದರೂ ವಸ್ತುಗಳನ್ನು ಸ್ವೀಕರಿಸಿದಲ್ಲಿ ಅದನ್ನು ಸ್ಟಾಕ್ ರಿಜಿಸ್ಟರಿನಲ್ಲಿ ಕಾಣಿಸುತ್ತೇವೆ. ಪಿನಾಪ್ತಲಿನ್ ಪುಡಿ ಮತ್ತು ಸೋಡಿಯಂ ಕಾರ್ಬೊನೇಟ್ ಪುಡಿಯನ್ನು ನಮ್ಮ ಕಛೇರಿಯಲ್ಲಿ ಸ್ವೀಕರಿಸಿದ ದಿನಾಂಕದ ಬಗ್ಗೆ, ಅದರ ತಯಾರಿಕೆ ದಿನಾಂಕ ಮತ್ತು expiry ದಿನಾಂಕವನ್ನು ನಮೂದಿಸುತ್ತೇವೆ.

67. ಎಂಟ್ರಸ್ಟ್ ಮೆಂಟ್ ಪಂಚನಾಮೆ ಮತ್ತು ಟ್ರ್ಯಾಪ್ ಪಂಚನಾಮೆಯಲ್ಲಿ ಪಿನಾಪ್ತಲಿನ್ ಪುಡಿ ಮತ್ತು ಸೋಡಿಯಂ ಕಾರ್ಬೊನೇಟ್ ಪುಡಿಯನ್ನು, ಅದರ ತಯಾರಿಕೆ ದಿನಾಂಕ ಮತ್ತು expiry ದಿನಾಂಕವನ್ನು ನಮೂದು ಮಾಡಿಲ್ಲ. ಸದರಿ ಪುಡಿಗಳನ್ನು expiry ದಿನಾಂಕದ ನಂತರ ಉಪಯೋಗಿಸಿದಲ್ಲಿ ಅದರ ಫಲಿತಾಂಶ ಅಥವಾ ಪರಿಣಾಮ ಸರಿಯಾಗಿ ಇರುವುದಿಲ್ಲ ಎನ್ನುವುದು ನಿಜ.

68. ಫಿರ್ಯಾದಿಗೆ ಸೋನಿ ಕಂಪನಿ ತಯಾರಿಕೆಯ ವಾಯ್ಸ್ ರೆಕಾರ್ಡರನ್ನು ಕೊಡಲಾಗಿತ್ತು. ಸದರಿ ವಾಯ್ಸ್ ರೆಕಾರ್ಡರಿನಲ್ಲಿ 3 ಗಂಟೆಗಳಿಗಿಂತ ಹೆಚ್ಚಿನ ಅವಧಿವರೆಗೆ ಮಾಡಿದ ಸಂಭಾಷಣೆಯನ್ನು ದಾಖಲು ಮಾಡಿಕೊಳ್ಳುವಷ್ಟು ಪ್ರಮಾಣದಲ್ಲಿ ಇತ್ತು. ಫಿರ್ಯಾದಿಗೆ ವಾಯ್ಸ್ ರೆಕಾರ್ಡರನ್ನು ಕೊಡುವುದಕ್ಕಿಂತ ಮೊದಲು, ಫಿರ್ಯಾದಿ ಆರೋಪಿಗಳು ತನಗೆ ಲಂಚದ ಬೇಡಿಕೆಯನ್ನು ಇಟ್ಟಿದ್ದಾರೆ ಎಂದು ತಿಳಿಸಿದ್ದಾನೆ. ಸದರಿ ಹೇಳಿಕೆಯ ಆಧಾರದಲ್ಲಿ ಅದೊಂದು ಸಂಜ್ಞೆಯ ಅಪರಾಧ ಎಂದು ಕಂಡು ಬಂದಿದೆ. ಸಂಜ್ಞೆಯ ಅಪರಾಧ ಎಂದು ಕಂಡು ಬಂದ ಕಾರಣ, ಪ್ರಕರಣ ದಾಖಲು ಮಾಡಲು ನನಗೆ ತೊಂದರೆ ಇರಲಿಲ್ಲ,

ಸಾಕ್ಷಿ ಮುಂದುವರಿದು, ಅದರ ಸತ್ಯಾಸತ್ಯತೆಗಳನ್ನು ಪರಿಶೀಲಿಸುವ ಸಲುವಾಗಿ ಲೋಕಾಯುಕ್ತ ಪ್ರಕರಣದಲ್ಲಿ ವಾಯ್ಸ್ ರೆಕಾರ್ಡರನ್ನು ನೀಡಿ ಖಚಿತಪಡಿಸಿಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಪ್ರಕರಣ ದಾಖಲಿಸಿದ ನಂತರ, ವಾಯ್ಸ್ ರೆಕಾರ್ಡರನ್ನು ನೀಡಿದಲ್ಲಿ ತೊಂದರೆ ಇರಲಿಲ್ಲ ಎನ್ನುವುದು ನಿಜ. ಫಿರ್ಯಾದುದಾರನಿಗೆ ಸುಳ್ಳು ದೂರನ್ನು ಕೊಡಲು ನಾನು ಪ್ರಚೋದನೆ ಮಾಡಿ, ಈ ಕೇಸನ್ನು ದಾಖಲು ಮಾಡಲು ಅನುಕೂಲ ಮಾಡಿಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

69. ವಾಯ್ಸ್ ರೆಕಾರ್ಡರನ್ನು ಯಾವ ರೀತಿ ಉಪಯೋಗಿಸಬೇಕು ಎನ್ನುವ ಬಗ್ಗೆ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ನನಗೆ ತರಬೇತಿ ಆಗಿದೆ. ನಮಗೆ ಕೊಟ್ಟ ಒಂದು ವರ್ಷದ ಅವಧಿಯ ತರಬೇತಿಯಲ್ಲಿ ವಾಯ್ಸ್ ರೆಕಾರ್ಡರನ್ನು ಉಪಯೋಗಿಸುವ ತರಬೇತಿಯನ್ನು ಸಹಾ ಕೊಡಲಾಗಿದೆ, ಆ ಬಗ್ಗೆ ಪ್ರತ್ಯೇಕವಾದಂತಹ ಪ್ರಮಾಣ ಪತ್ರವನ್ನು ನಮಗೆ ಕೊಟ್ಟಿಲ್ಲ. ನಮ್ಮ ಸೇವಾ ಪುಸ್ತಕದಲ್ಲಿ ನಮ್ಮ ತರಬೇತಿಯ ಬಗ್ಗೆ ನಮೂದಾಗುತ್ತದೆ, ಹಾಗೂ ಆ ಬಗ್ಗೆ ಪ್ರತ್ಯೇಕವಾದಂತಹ ದೃಢೀಕರಣ ಪತ್ರವನ್ನು ಕೊಡುವುದಿಲ್ಲ, ಸೇವಾ ಪುಸ್ತಕದಲ್ಲಿ ನಮಗೆ ವಾಯ್ಸ್ ರೆಕಾರ್ಡರನ್ನು ಉಪಯೋಗಿಸಲು ತರಬೇತಿ ಕೊಡಲಾಗಿದೆ ಎನ್ನುವ ಬಗ್ಗೆ ಪ್ರತ್ಯೇಕವಾಗಿ ಕಾಣಿಸಿರುವುದಿಲ್ಲ.

70. ಫಿರ್ಯಾದಿಗೆ ಕೊಟ್ಟ ವಾಯ್ಸ್ ರೆಕಾರ್ಡರ್ ಸುಸ್ಥಿತಿಯಲ್ಲಿ ಇದೆ ಎನ್ನುವ ಬಗ್ಗೆ ನಾನು ದೃಢೀಕರಣ ಪತ್ರವನ್ನು ಕೊಟ್ಟಿಲ್ಲ, ಸಾಕ್ಷಿ ಮುಂದುವರಿದು, ನಾನೇ ಪರೀಕ್ಷಿಸಿ ನೋಡಿದ್ದೇನೆ ಎಂದು ಹೇಳುತ್ತಾರೆ.

71. ಫಿರ್ಯಾದನ್ನು ಸ್ವೀಕರಿಸಿ, ಪ್ರ.ವ.ವರದಿಯನ್ನು ದಾಖಲು ಮಾಡಿ, ಕಡತವನ್ನು ಸಿದ್ಧಪಡಿಸಲು ನನಗೆ ಸುಮಾರು ಅರ್ಧದಿಂದ ಒಂದು ಗಂಟೆ ಅವಧಿ ಬೇಕಾಗಿದೆ. ಫಿರ್ಯಾದಿಗೆ ಕೊಟ್ಟ ವಾಯ್ಸ್ ರೆಕಾರ್ಡರನ್ನು, ನಿ.ಪಿ. 1 ನ್ನು ಪಡೆದುಕೊಳ್ಳುವ ಸಮಯದಲ್ಲಿ ಪರೀಕ್ಷಿಸಿ ನೋಡಿದ್ದೇನೆ. ವಾಯ್ಸ್ ರೆಕಾರ್ಡರನ್ನು ಎಷ್ಟು ಹೊತ್ತು ಪ್ಲೇ ಮಾಡಿದ್ದೇನೆ ಎಂದು ನಿಖರವಾಗಿ ನೆನಪಿಲ್ಲ, ಆದರೆ 15 ರಿಂದ 20 ನಿಮಿಷ ಪ್ಲೇ ಮಾಡಿದ್ದೇನೆ. ವಾಯ್ಸ್ ರೆಕಾರ್ಡರನ್ನು ಸಂಪೂರ್ಣವಾಗಿ ಪ್ಲೇ ಮಾಡಿ ನೋಡಿಲ್ಲ (ರೆಕಾರ್ಡ್ ಆದಷ್ಟು ಮಾತ್ರ ನೋಡಿದ್ದೇನೆ ಎಂದು ಸಾಕ್ಷಿ ಹೇಳಿದ್ದಾರೆ).

72. ಫಿರ್ಯಾದನ್ನು ದಾಖಲು ಮಾಡಿದ ನಂತರ ಪಂಚ ಸಾಕ್ಷಿಗಳನ್ನು ಬರಲು ಸಂಬಂಧಿಸಿದ ಇಲಾಖೆಗೆ ನೋಟೀಸನ್ನು ಕಳುಹಿಸಿದ್ದೇನೆ. ಆ ರೀತಿ ನೋಟೀಸನ್ನು ಕಳುಹಿಸಿದಾಗ ಸಮಯ ಎಷ್ಟಾಗಿತ್ತು ಎಂದು ನೆನಪಿಲ್ಲ. ಸದರಿ ಇಲಾಖೆಗೆ ಪ್ರ.ವ.ವರದಿಯನ್ನು ದಾಖಲು ಮಾಡುವುದಕ್ಕಿಂತ ಮೊದಲೇ ನೋಟೀಸನ್ನು ಕಳುಹಿಸಿದ್ದೇನೆ ಎನ್ನುವುದು ಸರಿಯಲ್ಲ. ನಮ್ಮ ಕಛೇರಿಯಿಂದ ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಛೇರಿ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಇದೆ. ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಛೇರಿ ಸುಮಾರು 5 ಕಿ.ಮೀ.ಗಿಂತ ಹೆಚ್ಚು ದೂರದಲ್ಲಿ ಇದೆ ಎಂದರೆ ನೆನಪಿಲ್ಲ. ಚಾಸಾ-3-ರಾಮಚಂದ್ರನಾಯ್ಕ ಮತ್ತು ಪ್ರಾಸಾ-2-ಮಂಜುನಾಥ ಇವರ ಕರ್ತವ್ಯದ ಸಮಯ ಸಂಜೆ 6.00 ಗಂಟೆ ಸಮಯಕ್ಕೆ ಮುಗಿದಿತ್ತು ಎನ್ನುವುದು ಸರಿಯಲ್ಲ. ಪ್ರತಿಯೊಂದು ಕಛೇರಿಯ ಕೆಲಸದ ಸಮಯ ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆಯವರೆಗೆ ಇರುತ್ತದೆ ಎನ್ನುವುದು ಸರಿಯಲ್ಲ. ಪೊಲೀಸು, ಅರಣ್ಯ, ಮತ್ತು ಆಸ್ಪತ್ರೆ ಇಲಾಖೆಗಳ

ಸಿಬ್ಬಂದಿಗಳನ್ನು ಹೊರತುಪಡಿಸಿ, ಉಳಿದ ಇಲಾಖೆಯ ಸಿಬ್ಬಂದಿಗಳು ಸಂಜೆ 6.00 ಗಂಟೆ ನಂತರ ಕಛೇರಿಯ ಕರ್ತವ್ಯ ನಿರ್ವಹಿಸುವುದಿಲ್ಲ ಎನ್ನುವುದು ಸರಿಯಲ್ಲ. ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಛೇರಿಯವರು ನಾನು ಕೊಟ್ಟ ಕೋರಿಕೆಯ ಪತ್ರದ ಮೇಲೆಯೇ ಚಾಸಾ-3 ಮತ್ತು ಪ್ರಾಸಾ-2 ನ್ನು ನಿಯೋಜಿಸಿದ ಬಗ್ಗೆ ಹಿಂಬರಹ ಬರೆದು ಕಳುಹಿಸಿದ್ದಾರೆ, ಸದರಿ ಹಿಂಬರಹವನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ. 62 ಎಂದು ಗುರುತಿಸಲಾಯಿತು (ಅದನ್ನು ಅಭಿಯೋಜನೆ ಹಾಜರುಪಡಿಸಿದ ಕಾರಣ ನಿ.ಪಿ. ಎಂದು ಗುರುತಿಸಲಾಗಿದೆ.).

73. ಫಿರ್ಯಾದಿ ದೂರು ಕೊಡಲು ಬಂದಾಗ, ವಾಯ್ಸ್ ರೆಕಾರ್ಡರಿನಲ್ಲಿ ಸಂಭಾಷಣೆಯನ್ನು ದಾಖಲು ಮಾಡಿಕೊಂಡು ನನ್ನ ಬಳಿ ತೆಗೆದುಕೊಂಡು ಬಂದಾಗ, ಸದರಿ ಸಂಭಾಷಣೆಯನ್ನು ಅವರಿಬ್ಬರು ಯಾವ ಜಾಗದಲ್ಲಿದ್ದಾಗ, ಎಷ್ಟು ಹೊತ್ತಿಗೆ, ಯಾವ ದಿನಾಂಕದಂದು ಮಾಡಿಕೊಳ್ಳಲಾಗಿದೆ ಎಂದು ನಾನು ವಿಚಾರಣೆ ಮಾಡಿಲ್ಲ. ಸಂಭಾಷಣೆಯಲ್ಲಿ ಮಾತನಾಡಿದ ಒಬ್ಬ ವ್ಯಕ್ತಿ ತನ್ನ ಹೆಸರನ್ನು ಕೃಷ್ಣಕುಮಾರ ಎಂದು ಹಾಗೂ ಆತ ತಹಸಿಲ್ದಾರನೆಂದು ಸಂಭಾಷಣೆಯಲ್ಲಿ ಹೇಳಿಕೊಂಡಿಲ್ಲ. ವಾಯ್ಸ್ ರೆಕಾರ್ಡರನ್ನು ಫಿರ್ಯಾದಿಗೆ ಕೊಡುವ ಮೊದಲು ನ್ಯಾಯಾಲಯದ ಅನುಮತಿಯನ್ನು ಪಡೆದಿಲ್ಲ.

74. ನಿ.ಪಿ.46 ರ ಕಾಲಂ ನಂ.3(ಎ) ದಲ್ಲಿ ಅಪರಾಧ ನಡೆದ ದಿನ ಶುಕ್ರವಾರ, ದಿನಾಂಕಃ08-04-2011, ಸಮಯ ಮಧ್ಯಾಹ್ನ 1.00 ಗಂಟೆ ಎನ್ನುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ. ಆ ಬಗ್ಗೆ ಫಿರ್ಯಾದಿಗೂ

ಯಾವುದೇ ದಾಖಲೆಯನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ, ಸಾಕ್ಷಿ ಮುಂದುವರಿದು, ಫಿರ್ಯಾದು ಮತ್ತು ಪ್ರ.ವ.ವರದಿಯ ನಕಲನ್ನು ಕೊಡಲಾಗಿದೆ ಎಂದು ಹೇಳುತ್ತಾರೆ.

75. ದಿನಾಂಕಃ 23-04-2011 ರಂದು ಮೌಖಿಕವಾಗಿ ನನಗೆ ಮಾಹಿತಿ ಕೊಡುವುದಕ್ಕಿಂತ ಮೊದಲೇ 31 ಎಕರೆ ಜಮೀನಿಗೆ ಪೋಡಿ ಪೂರ್ಣಗೊಂಡಿತ್ತು ಎನ್ನುವುದು ಸರಿಯಲ್ಲ. ದಿನಾಂಕಃ29-04-2011 ರಂದು ನಾನು ಅಮಾನತ್ತುಪಡಿಸಿದ ದಾಖಲೆಗಳಾದ ನಿ.ಪಿ.5 ರಲ್ಲಿ, ಪೋಡಿ ಸ್ಕೆಚ್, ಪೋಡಿ ತಃಖ್ತೆ, ಎಲ್.ಆರ್.ಟಿಪ್ಪಣಿ ಬುಕ್, ಪಿ.ಟಿ.ಶೀಟ್, ಎಲ್.ಆರ್. ಪಕ್ಕಾ ಬುಕ್, ದೂರುದಾರನ ಹೇಳಿಕೆ, ಇವುಗಳಲ್ಲಿ ದಿನಾಂಕಃ 23-04-2011 ಕ್ಕಿಂತ ಮೊದಲೇ ಅಂದರೆ ದಿನಾಂಕಃ31-07-2010 ಕ್ಕೆ ಪೋಡಿ ಕೆಲಸ ಮುಕ್ತಾಯವಾಗಿದೆ ಎಂದು ಕಂಡು ಬರುತ್ತದೆ ಎನ್ನುವುದು ಸರಿಯಲ್ಲ, ಸಾಕ್ಷಿಯು ಮುಂದುವರಿದು, ಕೇವಲ ಅಳತೆಯಾಗಿದೆ, ಪೋಡಿಯಾಗಿ ದಾಖಲಾಗಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ತೋರಿಸಿದ ಪುಟಗಳಿಗೆ ನಿ.ಪಿ.5(ಎಸ್) ರಿಂದ ನಿ.ಪಿ.5(ಎಕ್ಸ್) ಎಂದು ಗುರುತಿಸಲಾಯಿತು. ನಿ.ಪಿ.5(ಎಕ್ಸ್) ನಲ್ಲಿ ದೂರುದಾರ 2 ನೇ ಆರೋಪಿಯ ಸಮಕ್ಷಮ ಆ ರೀತಿ ಹೇಳಿಕೆ ಕೊಟ್ಟಿದ್ದಾರೆ ಎನ್ನುವುದು ನಿಜ, ಸಾಕ್ಷಿಯು ಮುಂದುವರಿದು, ಅದು ಕೇವಲ ಒಂದು ಸರ್ವೆ ನಂಬರ್ ದಾಗಿದ್ದು, ದೂರಿನಲ್ಲಿ ಹಲವಾರು ಸರ್ವೆ ನಂಬರ್ ಗಳು ಇದೆ ಎಂದು ಹೇಳುತ್ತಾರೆ. ನಿ.ಪಿ.5(ಟಿ)ದಲ್ಲಿ ಪಕ್ಕಾ ಪೋಡಿ ದುರಸ್ತಿ ಇರುವ ದಾಖಲೆಯಲ್ಲಿ 6 ದಾಖಲೆಗಳು ಸರ್ಕಾರಿ ಗೋಮಾಳ ಎಂದು ಮತ್ತು 2 ದಾಖಲೆಗಳು ಸರ್ಕಾರ ಖರಾಬು ಎಂದು ಕಂಡು ಬರುತ್ತದೆ ಎನ್ನುವುದು

ನಿಜ. ಸರ್ವೆ ನಂಬರ್-3 ರಲ್ಲಿ 26 ಪೋಡಿ ಬಾಬ್ತು ನಮೂದು ಇತ್ತು ಎನ್ನುವುದು ನಿಜ. ನಿ.ಪಿ.5(ಯು) ಎಲ್.ಆರ್.ಟಿಪ್ಪಣಿ ಪುಸ್ತಕ ಮತ್ತು ನಿ.ಪಿ.5(ಟಿ) ಪೋಡೆ ತಃಖ್ತೆಯಲ್ಲಿ ಸರ್ಕಾರಿ ಗೋಮಾಳ 26 ಎಕರೆ ಎಂದು ಕಂಡು ಬರುತ್ತದೆ ಎನ್ನುವುದು ನಿಜ. ನಿ.ಪಿ.5(ಡಬ್ಲ್ಯೂ)ದಲ್ಲಿ ಸರ್ಕಾರಿ ಗೋಮಾಳ 26 ಎಕರೆ ಎಂದು ಕಂಡು ಬರುತ್ತದೆ ಎನ್ನುವುದು ನಿಜ. ದಿನಾಂಕಃ 31-07-2010 ಕ್ಕೆ ಪಕ್ಕಾ ಪೋಡಿ ಆಗಿತ್ತು ಎಂದರೆ ಸರಿಯಲ್ಲ, ಆದರೆ ಗೋಮಾಳ ಎಂದು ಮಾತ್ರ ಬರೆದಿತ್ತು ಎಂದು ಹೇಳುತ್ತಾರೆ. ಟ್ರ್ಯಾಪ್ ಪಂಚನಾಮೆಯಲ್ಲಿ ಅಥವಾ ಸಾಕ್ಷಿದಾರರ ಹೇಳಿಕೆಯಲ್ಲಾಗಲೀ ಗೋಮಾಳ ಜಾಗ ಹಾಗೂ ಪಕ್ಕಾ ಪೋಡಿ ಆದ ಬಗ್ಗೆ ಕಾಣಿಸಿಲ್ಲ ಎಂದರೆ ಸಾಕ್ಷಿ ಪಕ್ಕಾಪೋಡಿ ಆಗಿಲ್ಲ, ಆದರೆ ಗೋಮಾಳ ಎಂದು ನಮೂದಿಸಿಲ್ಲ ಎಂದು ಹೇಳುತ್ತಾರೆ. ಸಾಕ್ಷಿದಾರರ ಗಮನಕ್ಕೂ ಸಹಾ ಈ ಬಗ್ಗೆ ತಂದಿಲ್ಲ ಎನ್ನುವುದು ಸರಿಯಲ್ಲ.

(ಈ ಹಂತದಲ್ಲಿ ಮುಂದಿನ ಪಾಟೀ ಸವಾಲಿಗೆ ಸಮಯ ನೀಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

Sd/-09-03-2020

**(ಉಮೇಶ ಎಂ. ಅಡಿಗ)**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಚಿಕ್ಕಮಗಳೂರು.**

ಸಾಕ್ಷಿ ಸಹಿಃ -

ಚ

**<u>ದಿನಾಂಕಃ 06-03-2021 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲುಃ1 ನೇ ಆರೋಪಿ ಪರಃ ಶ್ರೀ ಬಿಎಂ.ಎಲ್.ಜಿ. ವಕೀಲರಿಂದ</u>**

76. ಈ ದಿನ ನಾನು ನ್ಯಾಯಾಲಯಕ್ಕೆ ಕೇಸ್ ಡೈರಿಯನ್ನು ತಂದಿದ್ದೇನೆ. ವಕೀಲರಾದ ದೇವಕಿ ಅವರು ಎಸ್.ಪಿ. ರಿಜಿಸ್ಟ್ರಾರ್ ಅವರು ಆರ್.ಟಿ.ಐ. ಕೆಳಗೆ ಅರ್ಜಿ ಕೊಟ್ಟು ಕೆಲವು ದಾಖಲೆಗಳನ್ನು ಕೇಳಿದ್ದರು, ಆ ಬಗ್ಗೆ ಸಿಡಿಯಲ್ಲಿ ನಮೂದಾಗಿದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನನ್ನ ಅವಧಿಯಲ್ಲೇನು ನಮೂದಾಗಿರುವುದು ಕಂಡು ಬಂದಿಲ್ಲ ಎಂದು ಹೇಳಿರುತ್ತಾರೆ.

77. ಈಗ ಸಾಕ್ಷಿದಾರರಿಗೆ ಒಂದು ದಾಖಲೆಯನ್ನು ತೋರಿಸಿ ಆರ್.ಟಿ.ಐ. ಅರ್ಜಿಗೆ ಮಾಹಿತಿಯನ್ನು ತಾವೇ ಕೊಟ್ಟಿದ್ದೀರಾ ಎಂದು ತೋರಿಸಿ ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಮಾಹಿತಿ ಕೊಟ್ಟಿರುವುದು ನಾನೇ ಎಂದು ಹೇಳಿರುತ್ತಾರೆ, ಆ ಮಾಹಿತಿಯನ್ನು ನಿ.ಡಿ. 87 ಎಂದು ಗುರುತಿಸಲಾಯಿತು. ಕಾಂಪ್ಯಾಕ್ಟ್ ಡಿಸ್ಕನ್ನು ನ್ಯಾಯಾಲಯಕ್ಕೆ ಕೊಡಲಾಗಿದೆ ಎಂದು ನಿ.ಡಿ.87 ರಲ್ಲಿ ಕಾಣಿಸಿದೆ. ಈಗ ಸಾಕ್ಷಿದಾರರಿಗೆ ಮತ್ತೊಂದು ದಖಲೆಯನ್ನು ತೋರಿಸಿ ಆ ಕಾಂಪ್ಯಾಕ್ಟ್ ಡಿಸ್ಕನ್ನು ದೋಷಾರೋಪಣ ಪತ್ರದೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದು ಆರ್ಡರ್ ಶೀಟಿನಲ್ಲಿ ನಮೂದಿಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನಾನು ದೋಷಾರೋಪಣ ಪತ್ರದೊಂದಿಗೆ ಕೊಟ್ಟಿದ್ದೇನೆ ಎಂದು ಹೇಳಿರುತ್ತಾರೆ. ಈಗ ನಾನು ನೋಡುತ್ತಿರುವ ದಾಖಲೆ ಈ ಕೇಸಿನ ಆಡರ್ರ್ ಶೀಟಿನ ನಕಲು ಎನ್ನುವುದು ಸರಿ, ಅದನ್ನು ನಿ.ಡಿ. 88 ಎಂದು ಗುರುತಿಸಲಾಯಿತು.

78. ನಾನುನ್ಯಾಯಾಲಯಕ್ಕೂ ಮತ್ತು ಆರೋಪಿಗೂ ಕಾಂಪ್ಯಾಕ್ಟ್ ಡಿಸ್ಕಿಗೆ ಸಂಬಂಧಪಟ್ಟಂತೆ ತಪ್ಪು ಮಾಹಿತಿ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಪ್ರಸನ್ನ ಕುಮಾರ್ ಎನ್ನುವವರು ನಿಮ್ಮ ಅವಧಿಯಲ್ಲಿ ಆರ್.ಟಿ.ಐ. ಮೂಲಕ ಅರ್ಜಿಯನ್ನು ಕೆಲವೊಂದು ದಾಖಲೆಗಳಿಗೆ ಸಲ್ಲಿಸಿದ್ದರು, ಅದನ್ನೇನಾದರೂ ನ್ಯಾಯಾಲಯದ

ಗಮನಕ್ಕೆ ತಂದಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಆ ಬಗ್ಗೆ ನನಗೆ ನೆನಪಿಲ್ಲ ಎಂದು ಹೇಳಿರುತ್ತಾರೆ. ಪ್ರಸನ್ನ ಕುಮಾರ್ ಅವರ ವಿಚಾರಣೆ ಮಾಡಿ ಈ ಕೇಸಿನಲ್ಲಿ ಹೇಳಿಕೆ ಪಡೆದುಕೊಂಡಿಲ್ಲ ಎನ್ನುವುದು ಸರಿ. ಫ್ರಾಸಾ-1, ಪ್ರಸನ್ನ ಕುಮಾರ್ ಅವರ ವಿರುದ್ಧ ಮಾಡಿದ ದಾವೆಯಲ್ಲಿನ ಸಂಬಂಧಪಟ್ಟ ದಾಖಲೆಗಳನ್ನು ಪಡೆದು ನಾನೇನು ಇಲ್ಲಿ ಹಾಜರುಪಡಿಸಿಲ್ಲ. ಈ ಕೇಸಿಗೆ ಸಂಬಂಧಪಟ್ಟಂತೆ ಹೆಚ್.ಎನ್.ಮಹೇಶ, ವಕೀಲರು, ಚಿಕ್ಕಮಗಳೂರು, ಇವರು ಆರ್.ಟಿ.ಐ. ಅಡಿಯಲ್ಲಿ ಅರ್ಜಿಯನ್ನು ಕೊಟ್ಟಿದ್ದು ಅದರ ಬಗ್ಗೆ ಸಿಡಿಯಲ್ಲಿ ನಮೂದಾಗಿದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಸಿಡಿಯಲ್ಲಿ ನಮೂದಾಗಿಲ್ಲ, ಅರ್ಜಿ ಕೊಟ್ಟ ಬಗ್ಗೆ ನೆನಪಿಲ್ಲ ಎಂದು ಹೇಳಿರುತ್ತಾರೆ.

79. ಮಾಲು ಪಟ್ಟಿ ಸಂ.14/2011 ರಲ್ಲಿ ಕಾಣಿಸಿರುವ ಕ್ರ.ಸಂ. 1, 5, 10 ಮತ್ತು 13 ರ ವಸ್ತುಗಳನ್ನು ತಮ್ಮ ಬಳಿಯೇ ಇಟ್ಟುಕೊಳ್ಳಲು ನ್ಯಾಯಾಲಯದಿಂದ ಅನುಮತಿಯನ್ನು ಪಡೆದಿದ್ದೀರಿ ನಂತರ ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ತನಿಖೆ ಮುಗಿಯುವವರೆಗೆ ಮಾತ್ರ ಅನುಮತಿ ಕೇಳಿದ್ದು, ನಂತರ ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ ಎಂದು ಹೇಳಿರುತ್ತಾರೆ. ಮಾಲು ಪಟ್ಟಿ 14/2011 ನ್ನು ಸಾಕ್ಷಿದಾರರಿಗೆ ತೋರಿಸಿ ಇದನ್ನು ದಿನಾಂಕಃ 30-04-2011 ರಂದು ತಯಾರಿಸಿದ್ದು, ದಿನಾಂಕಃ29-04-2011 ಕ್ಕೆ ಅಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಸರಿಯಲ್ಲ ಎಂದು, ದಿನಾಂಕಃ 29-04-2011 ಕ್ಕೆ ತಯಾರಿಸಿದ್ದು, ನ್ಯಾಯಾಲಯಕ್ಕೆ ಕೊಟ್ಟಿದ್ದು ದಿನಾಂಕಃ 30-04-2011 ರಂದು ಎಂದು ಹೇಳಿರುತ್ತಾರೆ, ಅದನ್ನು ನಿ.ಡಿ. 89 ಎಂದು ಗುರುತಿಸಲಾಯಿತು(ನ್ಯಾಯಾಲಯದ ಕಡತದಲ್ಲೇ ಈ ಮಾಲು ಪಟ್ಟಿ ಇರುತ್ತದೆ). ಆ ಮಾಲು ಪಟ್ಟಿಯಲ್ಲಿ ಮೊದಲು 29 ಎಂದು ಬರೆದು ನಂತರ 30 ಎಂದು ತಿದ್ದಲಾಗಿದೆ ಎನ್ನುವುದು ಸರಿಯಲ್ಲ.

80. ಫ್ರಾಸಾ-5-ಕೆ.ಸಿ.ವಿಜಯ್, ಪರ್ಯಾವೀಕ್ಷಕರು, ಚಾಸಾ-5-ತಿಮ್ಮಯ್ಯ, ಶಿರಸ್ತೇದಾರ್, ಮತ್ತು ಫ್ರಾಸಾ-12-ರಂಜಿತ, ತಹಸಿಲ್ದಾರ್, ಇವರ ಹೇಳಿಕೆಗಳನ್ನು ನಾನು ಮಾಡಿಕೊಂಡಿಲ್ಲ ಎನ್ನುವುದು ಸರಿಯಲ್ಲ. ಹೆಚ್.ಎನ್. ಮಹೇಶ, ವಕೀಲರ

ಹೇಳಿಕೆಯನ್ನೇನಾದರೂ ಮಾಡಿಕೊಂಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಇಲ್ಲ ಎಂದು ಹೇಳಿರುತ್ತಾರೆ.

81. ದೂರು ಕೊಡುವುದಕ್ಕಿಂತ ಮೊದಲು ಪ್ರಾಸಾ-1 ನಿಮ್ಮ ಲೋಕಾಯುಕ್ತ ಕಛೇರಿಗೆ ಬಂದಿದ್ದರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ದಿನಾಂಕಃ 23-04-2011 ರಂದು ಸಾಯಂಕಾಲ ನಮ್ಮ ಕಛೇರಿಗೆ ಬಂದಿದ್ದರು ಎಂದು ಹೇಳಿರುತ್ತಾರೆ. ಆ ದಿನ ಹೇಳಿದ ಬಗ್ಗೆ ನಾವೇನು ಬರೆದುಕೊಂಡಿಲ್ಲ, ಆದರೆ ಎಸ್.ಹೆಚ್.ಡಿ. ಡೈರಿಯಲ್ಲಿ ಬಂದಿದ್ದಾರೆ ಎನ್ನುವ ಬಗ್ಗೆ ನಮೂದು ಮಾಡಿದೆ ಎಂದು ಹೇಳಿರುತ್ತಾರೆ.

82. ಪ್ರಾಸಾ-1 ಇವರು ವಾಯ್ಸ್ ರೆಕಾರ್ಡರನ್ನು ನಮಗೆ ಕೊಟ್ಟ ಬಗ್ಗೆ ಆ ದಿನ ಸ್ವೀಕೃತಿಯನ್ನು ಪ್ರಾಸಾ-1 ಇವರಿಗೆ ಕೊಡಲಿಲ್ಲ. ದಿನಾಂಕಃ 23-04-2011 ರಂದೇ ನೀವು ಈ ಕೇಸಿನ ತನಿಖೆಯನ್ನು ಮಾಡಲು ಪ್ರಾರಂಭ ಮಾಡಿದಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಇಲ್ಲ ಎಂದು ಹೇಳಿರುತ್ತಾರೆ. ದಿನಾಂಕ ಃ 23-04-2011 ರಂದು ವಾಯ್ಸ್ ರೆಕಾರ್ಡಿಂಗ್ ಗೆಂದು ಕೊಡುವ ಮೊದಲು ಅದನ್ನು ಪೂರ್ಣವಾಗಿ ಪ್ಲೇ ಮಾಡಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಅದನ್ನು ಪೂರ್ಣವಾಗಿ ಪ್ಲೇ ಮಾಡುವ ಅವಶ್ಯಕತೆ ಇಲ್ಲ, ಅದನ್ನು ಪೂರ್ಣವಾಗಿ ಡಿಲೀಟ್ ಮಾಡಿ ಕೊಟ್ಟಿದೆ ಎಂದು ಹೇಳಿರುತ್ತಾರೆ. ಟ್ರ್ಯಾಪ್‌ಗೆಂದು ದಿನಾಂಕಃ 29-04-2011 ರಂದು ಹೋಗುವಾಗ ಈ ವಾಯ್ಸ್ ರೆಕಾರ್ಡರ್ ಪ್ರಾಸಾ-1 ಇವರ ಬಳಿ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಟ್ರ್ಯಾಪ್‌ಗೆ ಹೋಗುವ ಮೊದಲು ಬೆಳಿಗ್ಗೆಯೇ ಪ್ರಾಯೋಗಿಕ ಪಂಚನಾಮೆ ಮಾಡುವಾಗ ಆ ವಾಯ್ಸ್ ರೆಕಾರ್ಡರ್ ನಲ್ಲಿ ಇರುವುದನ್ನು ಬೇರೆ ಸಿಡಿಗೆ ವರ್ಗಾಯಿಸಿ, ಖಾಲಿ ಮಾಡಿ ಪ್ರಾಸಾ-1 ಇವರಿಗೆ ಕೊಟ್ಟಿತ್ತು, ಅದು ಅವರ ಬಳಿ ಇತ್ತು ಎಂದು ಹೇಳಿರುತ್ತಾರೆ. ದಿನಾಕಃ29-04-2011 ರಂದೇ ಪ್ರಾಯೋಗಿಕ ಪಂಚನಾಮೆ ಮಾಡುವಾಗ ಸಿಡಿಗೆ ವರ್ಗಾವಣೆ ಮಾಡಿದ್ದು. ನೀವು ಆ ವಾಯ್ಸ್ ರೆಕಾರ್ಡರನ್ನು ವರ್ಗಾವಣೆ ಮಾಡುವ ಮೊದಲು ಫುಲ್ ಪ್ಲೇ ಮಾಡಿ ನೋಡಿದಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಅದರಲ್ಲಿ ವಾಯ್ಸ್ ರೆಕಾರ್ಡಿಂಗ್ ಇದ್ದದ್ದು 5 ರಿಂದ 10 ನಿಮಿಷ ಮಾತ್ರ ಅದಷ್ಟನ್ನು ಮಾತ್ರ ಪ್ಲೇ ಮಾಡಿದ್ದೆವು ಎಂದು ಹೇಳಿರುತ್ತಾರೆ. ಇನ್ನು 2 ಗಂಟೆ

50 ನಿಮಿಷಗಳ ಕಾಲದ್ದು ಅದರಲ್ಲಿ ವಾಯ್ಸ್ ರೆಕಾರ್ಡಿಂಗ್ ಇತ್ತೋ ಇಲ್ಲವೋ ಎಂದು ಪರಿಶೀಲಿಸಲಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಅದರಲ್ಲಿ ಇದ್ದದ್ದೇ 5 ರಿಂದ 10 ನಿಮಿಷಗಳ ಕಾಲ ರೆಕಾರ್ಡಿಂಗ್ ಎಂದು ಹೇಳಿರುತ್ತಾರೆ, ಸಾಕ್ಷಿದಾರರು ಮುಂದುವರಿದು ಅದರಲ್ಲಿ ಎಷ್ಟು ನಿಮಿಷಗಳ ಕಾಲ ರೆಕಾರ್ಡಿಂಗ್ ಇರುತ್ತದೆ ಎಂದು ತೋರಿಸುತ್ತದೆ ಎಂದು ಹೇಳಿರುತ್ತಾರೆ. ಎಷ್ಟು ನಿಮಿಷಗಳ ಕಾಲ ರೆಕಾರ್ಡಿಂಗ್ ಇತ್ತು ಎಂದು ಪ್ರಾಯೋಗಿಕ ಪಂಚನಾಮೆಯಲ್ಲಿ ಕಾಣಿಸಿಲ್ಲ.

83. ದಿನಾಂಕಃ 28-04-2011 ರಂದು ಪ್ರಾಸಾ-1 ನಮ್ಮ ಕಛೇರಿಗೆ ಬರುವ ಮೊದಲೇ ದೂರನ್ನು ತಯಾರಿಸಿಕೊಂಡು ಬಂದದ್ದು. ನಮ್ಮ ಕಛೇರಿಯಲ್ಲೇನು ಅದನ್ನು ತಯಾರಿಸಲು ಯಾರ ಸಹಾಯವನ್ನು ಪಡೆದಿಲ್ಲ. ಈಗ ಸಾಕ್ಷಿದಾರರಿಗೆ ನಿ.ಪಿ.1 ನ್ನು ತೋರಿಸಿ ಇದನ್ನೇ ತಮ್ಮ ಕಛೇರಿಗೆ ದೂರು ಎಂದು ಪ್ರಾಸಾ-1 ಕೊಟ್ಟದ್ದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹೌದು ಎಂದು ಹೇಳಿರುತ್ತಾರೆ.

84. ದಿನಾಂಕಃ 02-11-2016 ಎಂದು ನಮೂದಿಸಿರುವ ನ್ಯಾಯಾಲಯಕ್ಕೆ ದಿನಾಂಕಃ 03-11-2016 ರಂದು ವಿಶೇಷ ಸರ್ಕಾರಿ ಅಭಿಯೋಜಕರ ಮೂಲಕ ಪ್ರಾಸಾ-1 ಇವರು ಕೊಟ್ಟಿರುವ ಮನವಿ ಪತ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಇರಬಹುದು ಎಂದು ಹೇಳಿರುತ್ತಾರೆ, ಆ ಮನವಿಯನ್ನು ನಿ.ಡಿ.90 ಎಂದು ಗುರುತಿಸಲಾಯಿತು. ಈಗ ಸಾಕ್ಷಿದಾರರಿಗೆ ನಿ.ಪಿ.1 ನ್ನು ತೋರಿಸಿ ಅದರಲ್ಲಿರುವ ಹಸ್ತಾಕ್ಷರಕ್ಕೂ ಮತ್ತು ನಿ.ಡಿ. 90 ರಲ್ಲಿರುವ ಪ್ರಾಸಾ-1 ಇವರ ಹಸ್ತಾಕ್ಷರಕ್ಕೂ ವ್ಯತ್ಯಾಸ ಇದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನಿ.ಡಿ. 90 ರಲ್ಲಿರುವ ಹಸ್ತಾಕ್ಷರ ಅವರದೇ ಎಂದು ಗೊತ್ತಿಲ್ಲ, ಅವರು ಬೇರೆಯವರ ಮೂಲಕ ಬರೆಯಿಸಿರಬಹುದು ಎಂದು ಹೇಳಿರುತ್ತಾರೆ. ನಿ.ಪಿ.1 ರಲ್ಲಿ ಇರುವುದನ್ನು ನಾನೇ ಹೇಳಿ ಪ್ರಾಸಾ-1 ಇವರ ಮೂಲಕ ಬರೆಯಿಸಿದ್ದೇನೆ ಎನ್ನುವುದು ಸರಿಯಲ್ಲ.

85. ಲೋಕಾಯುಕ್ತ ಕಛೇರಿಯಲ್ಲಿ ಡ್ಯೂಟಿಯನ್ನು 24 x 7 ಎಂದು ಮಾಡಬೇಕೋ ಅಥವಾ duty hours ಏನಿರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಸಾಮಾನ್ಯವಾಗಿ ಬೆಳಿಗ್ಗೆ 8.00 ರಿಂದ ರಾತ್ರಿ 9.00 ಗಂಟೆಯವರೆಗೂ

ಕೆಲಸ ಮಾಡುತ್ತೇವೆ ಎಂದು ಹೇಳಿರುತ್ತಾರೆ. ಇಂತಿಷ್ಟೇ ಗಂಟೆ ಮಾಡಬೇಕೆಂದು ಸರ್ಕಾರದ ಆದೇಶ ಇದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಆದೇಶ ಏನೂ ಇಲ್ಲ, ಸಾಮಾನ್ಯವಾಗಿ ಅಷ್ಟು ಕೆಲಸ ಮಾಡುತ್ತೇವೆ ಎಂದು ಹೇಳಿರುತ್ತಾರೆ. ರಜಾ ದಿನಗಳಲ್ಲಿ ಲೋಕಾಯುಕ್ತ ಕಛೇರಿ ಕ್ಲೋಸ್ ಆಗಿರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಸಾಧಾರಣವಾಗಿ ಕ್ಲೋಸ್ ಮಾಡಿರುತ್ತೇವೆ ಎಂದು ಹೇಳಿ, ಸಾಕ್ಷಿದಾರರು ಮುಂದುವರಿದು ಕೆಲಸ ಇದ್ದಾಗ ಅಥವಾ ಟ್ರ್ಯಾಪ್‌ಗಳೇನಾದರೂ ಇದ್ದರೆ ರಜಾ ದಿನಗಳಲ್ಲೂ ಸಹಾ ಮಾಡುತ್ತೇವೆ ಎಂದು ಹೇಳಿರುತ್ತಾರೆ.

86. ಆಗ ಇದ್ದ ಲೋಕಾಯುಕ್ತ ಕಛೇರಿಯ ಫೋನ್ ನಂಬರ್ ಈಗ ನೆನಪಿಲ್ಲ. ದಿನಾಂಕಃ 23-04-2011, 25-04-2011 ಹಾಗೂ 28-04-2011 ರಂದು ನಿಮ್ಮ ಹಾಗೂ ಪ್ರಾಸಾ-1 ಇವರ ಮಧ್ಯೆ ಫೋನ್ ಸಂಭಾಷಣೆ ಅಗಿದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನೆನಪಿಲ್ಲ ಎಂದು ಹೇಳಿರುತ್ತಾರೆ. ದಿನಾಂಕಃ 23-04-2011 ರಿಂದ 28-04-2011 ಈ ಮಧ್ಯೆ ಪ್ರಾಸಾ-1 ಇವರೊಂದಿಗೆ ಫೋನಿನಲ್ಲಿ ಮಾತನಾಡಿದ ಬಗ್ಗೆ ಏನಾದರೂ ಸ್ಟೇಷನ್ ಡೈರಿಯಲ್ಲಿ ನಮೂದಾಗಿದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನಮೂದಾಗಿಲ್ಲ ಎಂದು ಹೇಳಿರುತ್ತಾರೆ. ದಿನಾಂಕಃ23-04-2011 ರಿಂದ 30-04-2011 ರವರೆಗೆ ಅಂದರೆ ಆ ದಿನಾಂಕವನ್ನೂ ಸೇರಿಕೊಂಡು ಈ ಅವಧಿಗೆ ಸಂಬಂಧಪಟ್ಟಂತೆ ನಿಮ್ಮ ಹಾಗೂ ಪ್ರಾಸಾ-1 ಇವರ ಮಧ್ಯೆ ಆದ ಫೋನ್ ಕಾಲ್ ಗಳ ಬಗ್ಗೆ ಕಾಲ್ ಡಿಟೇಲ್ಸ್ ಬಗ್ಗೆ ಹಾಜರುಪಡಿಸಿಲ್ಲ ಮತ್ತು ಸ್ಟೇಷನ್ ಡೈರಿಯಲ್ಲಿ ನಮೂದಿಸಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ದಿನಾಂಕಃ 29-04-2011 ರ ದಿನದ ಕಾಲ್ ಡಿಟೇಲ್ಸನ್ನು ಪಿರ್ಯಾದಿ ಮತ್ತು 2 ನೇ ಆರೋಪಿ ಮಧ್ಯೆ ಆದ ಕಾಲ್ ಡೀಟೇಲ್ಸ್ ಮಾತ್ರ ಹಾಜರುಪಡಿಸಿದ್ದೇನೆ ಎಂದು ಹೇಳಿರುತ್ತಾರೆ, ಸ್ಟೇಷನ್ ಡೈರಿಯಲ್ಲೇನು ನಮೂದಿಸಿಲ್ಲ ಎಂದು ಹೇಳಿರುತ್ತಾರೆ.

87. ದಿನಾಂಕಃ 28-04-2011 ರಂದು ಸಾಯಂಕಾಲ 5.00 ಗಂಟೆಗೆ ನೀವು ಕೆ ಎಸ್ ಆರ್ ಟಿ ಸಿ ಯ ಇಬ್ಬರು ಸಾಕ್ಷಿದಾರರನ್ನು ಪಂಚರನ್ನಾಗಿ ಕರೆಯಿಸಲು ಮನವಿ ಕೊಟ್ಟು ಕಳುಹಿಸಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಸರಿಯಲ್ಲ ಎಂದು,

5.00 ಗಂಟೆಗೆ ದೂರನ್ನು ಪಡೆದಿದ್ದು, ಕೇಸು ದಾಖಲಾದ ನಂತರ ಕಳುಹಿಸಿದ್ದು ಎಂದು ಹೇಳಿರುತ್ತಾರೆ. ಈಗ ಸಾಕ್ಷಿದಾರರಿಗೆ ಒಂದು ಪತ್ರವನ್ನು ತೋರಿಸಿ ಮಾಹಿತಿ ಹಕ್ಕು ಕೆಳಗೆ ಪಡೆದುಕೊಂಡಿದ್ದು, ಇದರ ಪ್ರಕಾರ 5.00 ಗಂಟೆಗೆ ತಾವು ಪಂಚರನ್ನು ಕರೆಯಿಸಲು ಸಿಬ್ಬಂದಿಯವರಿಗೆ ಈ ಪತ್ರವನ್ನು ಕೊಟ್ಟಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಕೇಸನ್ನು ದಾಖಲು ಮಾಡಿಕೊಂಡ ತಕ್ಷಣವೇ ಸಿಬ್ಬಂದಿಯವರಿಗೆ 5.00 ಗಂಟೆಗೆ, ಪಂಚರನ್ನು ಕರೆ ತನ್ನಿ ಎಂದು ಹೇಳಿದ್ದೇನೆ ಎಂದು ಹೇಳಿರುತ್ತಾರೆ, ಆ ದಾಖಲೆಯನ್ನು ನಿ.ಡಿ. 91 ಎಂದು ಗುರುತಿಸಲಾಯಿತು. ನಿ.ಡಿ. 91 ರೊಂದಿಗೆ ಕೇಸ್ ಡೈರಿ ಸಂ.1 ರಿಂದ ಕೇಸ್ ಡೈರಿ ಸಂ.34 ಎಂದು ಇದ್ದು, ಇದಿಷ್ಟನ್ನು ತಾವೇ ಆರ್ ಟಿ ಐ ಅಡಿಯಲ್ಲಿಕೊಟ್ಟಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹೌದು ಎಂದು ಹೇಳಿರುತ್ತಾರೆ. ಕೇಸ್ ಡೈರಿ ನಂ.1 ರಿಂದ 34 ಎಂದು ಕಾಣಿಸಿರುವ ಇಷ್ಟನ್ನು ಸೇರಿಸಿ ನಿ.ಡಿ.91 ಎಂದೇ ತೆಗೆದುಕೊಳ್ಳಲಾಗಿದೆ (ಕವರಿಂಗ್ ಲೇಟರಿನಲ್ಲಿ ಸಿಡಿಗೆ ಸಂಬಂಧಪಟ್ಟಂತೆ ಒಟ್ಟು 82 ಪುಟಗಳು ಎಂದು ಕಾಣಿಸಿದೆ).

88. ದಿನಾಂಕಃ 19-09-2013 ರಂದು ನೀವು ಅರ್ಜಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹೌದು ಎಂದು ಹೇಳಿರುತ್ತಾರೆ (ಅದು ನ್ಯಾಯಾಲಯದ ರೆಕಾರ್ಡಿನಲ್ಲಿ ಇರುತ್ತದೆ) ಅದರಲ್ಲಿರುವ ಸಹಿ ನನ್ನದೇ, ಆ ಪತ್ರವನ್ನು ನಿ.ಡಿ.92 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಡಿ.92(ಎ) ಎಂದು ಗುರುತಿಸಲಾಯಿತು

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ವೇಳೆ ಮುಗಿದಿದೆ, ಮಧ್ಯಾಹ್ನ 2013 ನೇ ಇಸ್ವಿಗೆ ಸಂಬಂಧಪಟ್ಟ ಕೇಸಿನ ವಾದ ಕೇಳಲು ಇದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ**

Sd/-06-03-2021
**(ಶುಭ ಗೌಡರ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**